ಅಧ್ಯಕ್ಷರು:- ಇಲ್ಲಾ ನಿಮ್ಮದು ವಜಾ ಮಾಡುವುದಿಲ್ಲ. ನಿಮ್ಮದನ್ನು ನೀವು ತೆಗೆದುಕೊಳ್ಳಿ. ಅವರದು ಆಗಿರುವುದು ಇರಲಿ ಎಂದು ಅಷ್ಟೇ. ಈಗ ಮಾನ್ಯ ವೀರಪ್ಪಮೊಯಿಲಿಯವರು ಭಾಷಣವನ್ನು ಮುಂದುವರಿಸಬೇಕಲ್ಲ.

ಶ್ರೀ ಗುತ್ತೇದಾರ್ ಸುಭಾಷ್ ರುಕ್ಮಯ್ಯ:- ಒಂದೇ ತಾಲ್ಲೂಕು ಇರುವುದರಿಂದ ಕನ್‌ಫ್ಯೂಷನ್ ಆಗಿದೆ.

ಅಧ್ಯಕ್ಷರು:- ಪರವಾಗಿಲ್ಲ ಬಿಡಿ. ಕ್ಲಿಯರ್ ಆಯಿತಲ್ಲ.

ಶ್ರೀ ಡಿ.ಆರ್.ಪಾಟೀಲ್:- ಮಾನ್ಯ ಅಧ್ಯಕ್ಷರೇ, ಒಂದು ನಿಮಿಷ. ಒಂದು ಸಬ್‌ಮಿಷನ್ ಅಗ್ರಿಕಲ್ಚರ್ ಮಿನಿಸ್ಟರ್‌ಗೆ ಇತ್ತು.

ಅಧ್ಯಕ್ಷರು:- ಅಗ್ರಿಕಲ್ಚರ್ ಮಿನಿಸ್ಟರ್ ಇಲ್ಲವಲ್ಲಾ.

ಶ್ರೀ ಡಿ.ಆರ್.ಪಾಟೀಲ್:- ಇದ್ದಾರೆ ಸಾರ್.

ಅಧ್ಯಕ್ಷರು:- ಮಾನ್ಯ ಭೈರೇಗೌಡರೇ, ತಾವು ದಯಮಾಡಿ.

ವಿಷಯ:- **(ಅ) ಗೊಬ್ಬರ ಬೆಲೆ ಕುರಿತು.**

ಶ್ರೀ ಡಿ.ಆರ್.ಪಾಟೀಲ್ (ಗದಗ್):- ಮಾನ್ಯ ಅಧ್ಯಕ್ಷರೇ, ನನ್ನ ಕ್ಷೇತ್ರದಲ್ಲಿ ಡಿಎಪಿಯನ್ನು ಈಗ ಒಂದು ಬ್ಯಾಗ್‌ಗೆ 495ರ ಬದಲಿಗೆ 550ರೂಪಾಯಿಗಳ ಹಾಗೆ ಮಾರಾಟ ಮಾಡುತ್ತಿದ್ದಾರೆ. ಮತ್ತೆ ಉಳಿದ ಗೊಬ್ಬರದ ಬೆಲೆ ಯಾವುದನ್ನೂ ಇಳಿಸಿಲ್ಲ. ಹಳೆಯ ರೇಟ್‌ನಲ್ಲಿಯೇ ಮಾರುತ್ತಿದ್ದಾರೆ. ಖಾಸಗಿಯವರು ಡಿಎಪಿ ಮಾತ್ರ ಜಾಸ್ತಿನ ರೇಟಿಗೆ ಮಾರುತ್ತಿದ್ದಾರೆ. ಅದಕ್ಕೆ ದಯವಿಟ್ಟು ಅಲ್ಲಿ ಅಧಿಕಾರಿಗಳಿಗೆ ಆದೇಶ ಕೊಟ್ಟು ಅದರ ಬಗ್ಗೆ ಕ್ರಮ ತೆಗೆದುಕೊಳ್ಳಬೇಕು. ಅದು ಬ್ಲಾಕ್ ಮಾರ್ಕೆಟ್ ಆಗದಂತೆ ತಾವು ವ್ಯವಸ್ಥೆ ಮಾಡಬೇಕು.

ಒಬ್ಬ ಮಾನ್ಯ ಸದಸ್ಯರು:- ಮಾನ್ಯ ಅಧ್ಯಕ್ಷರೇ, ಹುಬ್ಬಳ್ಳಿಯಲ್ಲಿ ಇದೇ ರೀತಿ ಮಾರಾಟ ಮಾಡುತ್ತಿದ್ದಾರೆ. ಬಹಳ ಪ್ರಾಬ್ಲಮ್ ಇದೆ. ಗೊಬ್ಬರದ ಪ್ರಾಬ್ಲಮ್ ಎಲ್ಲಾ ಕಡೆ ಇದೆ. ದಯವಿಟ್ಟು ಇದನ್ನು ಚರ್ಚೆಗೆ ತೆಗೆದುಕೊಳ್ಳಬೇಕು. ಹುಬ್ಬಳ್ಳಿಯಲ್ಲಿ ಈ ಗೊಬ್ಬರದ ಬಗ್ಗೆ ಒಂದು ದೊಡ್ಡ ಗದ್ದಲ ನಡೆಯುತ್ತಿದೆ.

ಶ್ರೀ ಬಿ.ಎಸ್.ಯಡಿಯೂರಪ್ಪ:- ಮಾನ್ಯ ಅಧ್ಯಕ್ಷರೇ, ಸಬ್ಸಿಡಿ ಖರೀದಿಯಾಗಿತ್ತು. ಮಾಲೀಕರು ಲೂಟಿ ಮಾಡುವುದಕ್ಕೆ ಹೊರಟಿದ್ದರು. ನಮಗೆ ಗೊತ್ತಿದೆ ತಾವು ಬಿಗಿ ಮಾಡುತ್ತೀರಿ ಎನ್ನುವ ವಿಶ್ವಾಸ ಇದೆ. ದಯಮಾಡಿ ಈ ಸಬ್ಸಿಡಿ ಏನು ಇದೆ. ಇದರ ಆಧಾರದ ಮೇಲೆ ಸರಿಯಾದಂಥ ಡೈರೆಕ್ಷನ್‌ನ್ನು ಕೊಡಬೇಕು.

ಅಧ್ಯಕ್ಷರು:- ಎರಡು-ಮೂರು ದಿವಸದಿಂದ ಮಳೆಯಾಗಿರುವುದರಿಂದ ಎಲ್ಲಾ ಕಡೆ ಗೊಬ್ಬರಕ್ಕೆ ಬೇಡಿಕೆ ಜಾಸ್ತಿಯಾಗಿದೆ. ಚಿಂತಾಮಣಿಯಲ್ಲಿ ನೋಡಿ. ಅವರು ದುಪ್ಪಾರಿ

ಬೆಲೆಯಲ್ಲಿ ಮಾರುತ್ತಿದ್ದರು ಎಂದು ರೈತರೆಲ್ಲಾ ಗಲಾಟೆ ಮಾಡಿದ್ದಾರೆ. I think, the whole House is anxious about it. ಒಂದು ನಿಮಿಷ ನೋಡೋಣ ಏನು ಹೇಳುತ್ತಾರೆ ಮಂತ್ರಿಗಳು.

+ಶ್ರೀ ಸಿ.ಭೈರೇಗೌಡ (ಕೃಷಿ ಸಚಿವರು):- ಮಾನ್ಯ ಅಧ್ಯಕ್ಷರೇ, ಬಹಳ ಜನ ಸ್ನೇಹಿತರು ಈ ವಿಚಾರವನ್ನು ಪ್ರಸ್ತಾಪಮಾಡುವುದಕ್ಕೆ ಕಾತುರತೆಯನ್ನು ತೋರಿಸಿದ್ದಾರೆ. ನಾನು ಅವರೆಲ್ಲರನ್ನೂ ಸಹಾ ಅಭಿನಂದಿಸುತ್ತೇನೆ. ಕಾರಣವೇನೆಂದರೆ.....

ಅಧ್ಯಕ್ಷರು:- ನಾನು ಇಲ್ಲ.

+ಶ್ರೀ ಸಿ.ಭೈರೇಗೌಡ:- ತಾವು ಕೂಡ ಸೇರಿ....

ಅಧ್ಯಕ್ಷರು:- ಲಾಸ್ಟ್‌ಗೇ ನಾನು. ಮೊಯಿಲಿಯವರೇ ಯಾವಾಗಲೂ ಇವರ ಲಿಸ್ಟ್‌ನಲ್ಲಿ ನಾನು ಲಾಸ್ಟ್.

+ಶ್ರೀ ಸಿ.ಭೈರೇಗೌಡ:- ತಾವು ಸ್ವತಃ ವ್ಯವಸಾಯಗಾರರಾಗಿದ್ದುಕೊಂಡು ವ್ಯವಸಾಯಗಾರರ ಕತೆ, ಅವರ ನೋವು ನಲಿವು ಎಲ್ಲವೂ ಸಹಾ ತಮಗೂ ಕೂಡ ಗೊತ್ತಿದೆ. ಈಗ ಬಿತ್ತನೆ ಕಾಲ ಎಲ್ಲಾ ಕಡೆ ಪ್ರಾರಂಭವಾಗಿದೆ. ಅಂಥ ಸಂದರ್ಭದಲ್ಲಿ ಕೇಂದ್ರಸರ್ಕಾರದವರು ಬೆಲೆಯನ್ನು ಕಡಿಮೆ ಮಾಡುವ ಕ್ರಮವನ್ನು ಮಾಡಿದ್ದಾರೆ. ಡಿಎಪಿ ಮತ್ತೆ ಕಾಂಪ್ಲೆಕ್ಸ್ ಗೊಬ್ಬರ ಇವೆಲ್ಲಾ ಸಹಾ ಸಾಕಷ್ಟು ಕಡಿಮೆಯಾಗಿದೆ. 50 ಕೆಜಿ ಮೂಟೆಗೆ ನೂರು ರೂಪಾಯಿಯವರೆಗೂ ಗೊಬ್ಬರದ ಬೆಲೆ ಕಡಿಮೆಯಾಗಿದೆ. ಕೇಂದ್ರಸರ್ಕಾರದವರು ಅದರಲ್ಲೂ ಸಹಾ ಪ್ರಮುಖವಾಗಿ ಪ್ರಧಾನಮಂತ್ರಿಗಳು ಈ ಕ್ರಮವನ್ನು ತೆಗೆದುಕೊಂಡಿದ್ದಾರೆ. ನಾನು ಈ ಸಂದರ್ಭದಲ್ಲಿ ಒಬ್ಬ ರೈತನಾಗಿ, ರೈತರ ಹಿತವನ್ನು ಕಾಪಾಡತಕ್ಕಂಥ ಒಂದು ಜವಾಬ್ದಾರಿಯನ್ನು ಹೊತ್ತಂತವನಾಗಿ ನಾನು ಅವರನ್ನು ಅಭಿನಂದಿಸುತ್ತೇನೆ.

ಶ್ರೀ ಕಾಗೋಡು ತಿಮ್ಮಪ್ಪ:- ಅಭಿನಂದನೆಗೆ ಒಂದು ಮಿತಿ ಇರಲಿ.

ಅಧ್ಯಕ್ಷರು:- ಅಭಿನಂದಿಸಿದರೆ ನಿಮಗೇನು ಕಷ್ಟ ತಿಮ್ಮಪ್ಪನವರೇ? ಅವರೊಂದು ಅಭಿನಂದನೆಯನ್ನು ದೇವೇಗೌಡರಿಗೆ ಸಲ್ಲಿಸಿದರೆ, ಅದಕ್ಕೆ ಮಿತಿ ಒಂದು ಹೇಳುತ್ತೀರಲ್ಲಾ, ಒಳ್ಳೆಯ ಗೆಳೆಯರು ನೀವು.

+ಶ್ರೀ ಸಿ.ಭೈರೇಗೌಡ:- ನಾನು ಅಭಿನಂದಿಸಿದ್ದು ಯಾವ ಕಾರಣಕ್ಕೋಸ್ಕರ ಎಂದು ಹೇಳಿದರೆ ನಮ್ಮ ಸ್ನೇಹಿತರು ಕೆಲವರಿಗೆ ಅದು ಬೇಸರವಾಗುತ್ತದೆ. ಅದರಿಂದ ಕಾರಣ ಹೇಳುವುದಕ್ಕೆ ಹೋಗುವುದಿಲ್ಲ.

ಶ್ರೀ ಕಾಗೋಡು ತಿಮ್ಮಪ್ಪ:- ಅವರು ಪ್ರಾರಂಭ ಮಾಡಿದ್ದಾರೆ. ಬೇಸರ ನಮಗೆ ಏನಾಗುವುದು? ಅವರ ಮನಸ್ಸಿನಲ್ಲಿ ಏನು ಇದೆಯೋ ಹೇಳಿಬಿಡಲಿ.

ಶ್ರೀ ಎಂ.ಮಲ್ಲಿಕಾರ್ಜುನ ಖರ್ಗೆ:- ಈಗ ಜೀರೋ ಅವರ್‌ನಲ್ಲಿ ಏಕೆ ಬೇಕು?

ಕಾವೇರಿಯ ಬಗ್ಗೆ ಚರ್ಚೆ ನಡೆಯಲಿ.

ಅಧ್ಯಕ್ಷರು:- ಬೇಗ ಮುಗಿಸಿ ಭೈರೇಗೌಡರೇ.

ಶ್ರೀ ಸಿ.ಭೈರೇಗೌಡ:- ನನಗೆ ಹೇಳುವುದಕ್ಕೆ ಇಷ್ಟವಿಲ್ಲ. ಆದರೆ ಬಹಳ ವರ್ಷಗಳ ಹಿಂದೆ ಆಗಬೇಕಾಗಿದ್ದಂಥ ಕೆಲಸವನ್ನು ಮಾನ್ಯ ದೇವೇಗೌಡರವರು ಮಾಡಿದ್ದಾರೆ. ಅದರಿಂದ ಇವತ್ತು ಏನಾಗಿದೆ, ನಮ್ಮ ದೇಶದಲ್ಲಿ ಏನಾದರೂ ಕೂಡ ಬೆಲೆ ಏರುತ್ತದೆ ಎಂದರೆ ಯಾರನ್ನೂ ಹೇಳುವುದಿಲ್ಲ, ಕೇಳುವುದಿಲ್ಲ ಅದಕ್ಕಷ್ಟೇ ಅದೇ ಬೆಲೆ ಏರಿಹೋಗುತ್ತದೆ. ಬೆಲೆ ಇಳಿಸಬೇಕು ಎಂದು ಬಂದಾಗಲೇ ಬರತಕ್ಕಂಥದ್ದು ಸಂಕಟ. ಎಲ್ಲರಿಗೂ ಕೂಡ ಸಂಕಟ. ಕೇಂದ್ರ ಸರ್ಕಾರದವರು ಬೆಲೆಯನ್ನು ನಿಗದಿಪಡಿಸಿದ ತಕ್ಷಣ, ರಾಜ್ಯಸರ್ಕಾರ ಕೂಡ ಆಜ್ಞೆ ಮಾಡಿ, ಎಲ್ಲಾ ಕಡೆ ಅದನ್ನು ಕಳುಹಿಸಿದ್ದೇವೆ. ಜೊತೆಗೆ ಸುದ್ದಿಮಾಧ್ಯಮಗಳ ಮೂಲಕ ಇದಕ್ಕೆ ವ್ಯಾಪಕವಾದ ಪ್ರಚಾರವನ್ನು ಸಹ ನಾವು ನೀಡಿದ್ದೇವೆ. ಇದು ರೈತರಿಗೆ ತಲುಪಬೇಕು ಎನ್ನುವ ಉದ್ದೇಶದಿಂದ ಇದೆಲ್ಲವನ್ನೂ ಕೂಡ ಮಾಡಿದ್ದೇವೆ. ಕೆಲವು ಕಡೆ ಇವತ್ತು ಮಳೆ ಬಿದ್ದಿದೆ, ಹದ ಇರುವಾಗ ನಾವು ಬಿತ್ತನೆ ಕೆಲಸ ಮಾಡಬೇಕಾಗುತ್ತದೆ. ಇವತ್ತು ಕಡಿಮೆ ದರದ ಬಗ್ಗೆ ನಾವು ಪತ್ರಿಕೆಯಲ್ಲಿ ಬೇರೆ ಕಡೆ ತಿಳಿಸಿದ್ದೇವೆ. ಆ ಬೆಲೆಗೆ ಗೊಬ್ಬರ ಕೊಂಡುಕೊಳ್ಳುವ ತಪಕ ರೈತರಿಗೆ ಇದೆ. ಈ ರೀತಿ ಹೋದಂಥ ಸಂದರ್ಭದಲ್ಲಿ ಕೆಲವು ಕಡೆ ಈ ವರ್ತಕರಾಗಿರತಕ್ಕಂಥವರು ಕೆಲವರು ಅನಾವಶ್ಯಕವಾಗಿ ಬಾಗಿಲು ಹಾಕಿದ್ದಾರೆ. ಗೊಬ್ಬರ ಇದ್ದರೂ ಸಹ ಇಲ್ಲ ಎಂದು ಹೇಳಿದ್ದಾರೆ. ಇದಕ್ಕೆ ನಾನು ಕಳೆದ ಎರಡು-ಮೂರು ದಿವಸಗಳಿಂದ ಅನೇಕ ಕಡೆ ಏನೇನು ಕ್ರಮ ತೆಗೆದುಕೊಳ್ಳಬೇಕೋ ಅದನ್ನು ತೆಗೆದುಕೊಳ್ಳುತ್ತಿದ್ದೇನೆ. ಅಧಿಕಾರಿಗಳಿಗೆ ಅವರು ಹೇಳತಕ್ಕಂಥ ಸಬೂಬುಗಳು ಇದ್ದಾವಲ್ಲ, ಆ ಸಬೂಬುಗಳಿಗೆ ನೀವು ಬೆಲೆ ಕೊಡಬೇಕಾಗಿಲ್ಲ ಎನ್ನುವ ಮಾತನ್ನು ಸಹ ಹೇಳಿದ್ದೇನೆ. ಆದರೆ ಇಲ್ಲಿ ಕಾನೂನಿನ ಒಂದು ತೊಡಕು ಇದೆ. ಆ ಕಾನೂನಿನ ತೊಡಕೇನೆಂದರೆ ಯೂರಿಯಾ ಒಂದು ಕಂಟ್ರೋಲ್ಡ್ ಐಟಂ. ಇನ್ನು ಉಳಿದಂಥ ಕಾಂಪ್ಲೆಕ್ಸ್ ಗೊಬ್ಬರಗಳು ಏನಿದ್ದಾವೆ, ಅವುಗಳು ಕಂಟ್ರೋಲ್ಡ್ ಐಟಂ ಅಲ್ಲ. ತಯಾರಕರು ಯಾರಿದ್ದಾರೆ, ಆ ತಯಾರಕರು ನಮ್ಮ ಈ ರೀಯಾಯಿತಿ ದರ ಅಂದರೆ ಸಬ್ಸಿಡಿ ಸ್ಕೀಮಿಗೆ ಒಳಪಟ್ಟರೆ, ಅವರು ನಾವು ನಿಗದಿಮಾಡಿರತಕ್ಕಂಥ ಬೆಲೆಗೆ ಮಾರಾಟ ಮಾಡುವುದಕ್ಕೆ ಅವಕಾಶ ಇದೆ. ನಾವು ಕೇಳುವುದಕ್ಕೂ ಕೂಡ ನಮಗೆ ಅವಕಾಶ ಇದೆ. ಅವರು ಸಬ್ಸಿಡಿ ಸ್ಕೀಮಿಗೆ ಬರದಿದ್ದರೆ, ನಾವು ಕೇಳುವ ಹಾಗೆ ಇಲ್ಲ. ಅವರು ಎಷ್ಟಕ್ಕಾದರೂ ಗೊಬ್ಬರವನ್ನು ಮುಕ್ತಮಾರುಕಟ್ಟೆ ಬೆಲೆಯಲ್ಲಿ ಮಾರಾಟ ಮಾಡಿಕೊಳ್ಳುವ ಅಧಿಕಾರ ಇದೆ. ಅದರಿಂದ ಕೆಲವು ತಯಾರಕರು ಇವತ್ತು ಈ ಗೊಬ್ಬರಗಳನ್ನು ನಾವು ನಿಗದಿಪಡಿಸಿದಂಥ ಬೆಲೆಗೆ ಮಾರಾಟ ಮಾಡುವುದಕ್ಕೆ ತಯಾರಿಲ್ಲ. ನಿನ್ನೆ ದಿವಸ ನನ್ನ ಹತ್ತಿರ ಕೆಲವರು ಬಂದಿದ್ದರು. ಇಲ್ಲಾ, ಇದು ಬಹಳ ಕಡಿಮೆ ಬೆಲೆಯನ್ನು ನೀವು ನಿಗದಿಪಡಿಸಿದ್ದೀರಿ, ನೀವು ಹೆಚ್ಚು ಮಾಡಬೇಕು ಎಂದು ಹೇಳಿದರು.

ಶ್ರೀ ಬಿ.ಎಸ್.ಯಡಿಯೂರಪ್ಪ:- ಮಾನ್ಯ ಅಧ್ಯಕ್ಷರೆ, ತಮ್ಮಲ್ಲಿ ಒಂದೇ ಒಂದು ವಿನಂತಿ. ಹೋದ ವರ್ಷ ಇದೇ ರೀತಿ ಕಾರ್ಖಾನೆ ಮಾಲೀಕರು ನಿಗದಿ ಮಾಡಿದಂಥದ್ದು

ಒಂದು ದರ, ಇವರೇನು. ಒಂದು ಒಪ್ಪಂದಕ್ಕೆ, ನಿರ್ಣಯಕ್ಕೆ ಬಂದು ದರ ನಿಗದಿ ಮಾಡದೇ, ನಮ್ಮ ರಾಜ್ಯಕ್ಕೆ ಬರಬೇಕಾದ 60-70 ಕೋಟಿ ಸಬ್ಸಿಡಿಯನ್ನು ಉಪಯೋಗಿಸಿಕೊಳ್ಳದೇ, ಹೊರರಾಜ್ಯದಿಂದ ತಂದು ದುಬಾರಿ ಬೆಲೆಗೆ ಮಾರ್ಕೆಟ್ಟಿನಲ್ಲಿ ರೈತರು ಕೊಂಡುಕೊಳ್ಳಬೇಕಾಯಿತು, ವ್ಯಾಪಾರಸ್ಥರು ಲಾಭ ಮಾಡಿಕೊಂಡರು. ತಾವೇ ಈಗ ಹೇಳಿದಂತೆ ಕೆಲವು ಕಡೆ ಮಳೆ ಬಿದ್ದಿದೆ. ಬಿತ್ತನೆ ಕೆಲಸಕ್ಕೆ ಗೊಬ್ಬರ ಬೇಕು. ಈ ರೇಟಿನಲ್ಲಿ ಗೊಂದಲ ಇರುವುದರಿಂದ ಕೇಂದ್ರ ಸರ್ಕಾರ ಸಬ್ಸಿಡಿ ಕೊಟ್ಟ ಮೇಲೂ ಇವತ್ತು ಅದರ ಉಪಯೋಗ ರಾಜ್ಯ ರೈತರಿಗೆ ಆಗುತ್ತಿಲ್ಲ. 24 ಗಂಟೆಯೊಳಗೆ ಅವರ ಜೊತೆ ಮಾತನಾಡಿ ದರವನ್ನು ನಿಶ್ಚಯ ಮಾಡಿ, ಸಬ್ಸಿಡಿ ನಮಗೆ ಸಿಗಬೇಕು. ದೇವರು ವರ ಕೊಟ್ಟರೂ ಪೂಜಾರಿ ವರ ಕೊಡಲಿಲ್ಲ' ಎಂದು ಹೇಳಿ ನೀವೂ ಅವರ ಜೊತೆ ಮಾತುಕತೆ ಆಡದೇ ನಿಷ್ಕರ್ಷೆಗೆ ಬರದೇ ಇದ್ದರೆ, ಅವನ ಮೇಲೆ ಕ್ರಮ ತೆಗೆದುಕೊಳ್ಳುವುದಕ್ಕೆ ಏನಾದರೂ ಮಾರ್ಗ ಇರಬೇಕು. ಇಲ್ಲದೇ ಹೋದರೆ ಅದಕ್ಕೆ ಏನಾದರೂ ಪರಿಹಾರ ಹುಡುಕಬೇಕು. ಇಲ್ಲ ಎಂದರೆ ಒಂದೊಂದು ದಿನ ತಡವಾದರೂ ಈ ರಾಜ್ಯದ ರೈತರಿಗೆ ಆ ಸಬ್ಸಿಡಿ ಸಿಗುವುದಿಲ್ಲ, ರೈತ ಇವರ ಒಂದು ಬೆಲೆಯನ್ನು ತೆರಬೇಕಾಗುತ್ತದೆ. ಅದಕ್ಕೆ ಏನು ಮಾಡುತ್ತೀರಿ ಹೇಳಿ?

ಶ್ರೀ ಸಿ.ಭೈರೇಗೌಡ:- ಮಾನ್ಯ ಅಧ್ಯಕ್ಷರೆ, ಅವರು ಹೇಳಿದ ಹಾಗೆ ಕೇಳುವುದಕ್ಕೆ ನಾವು ತಯಾರಿಲ್ಲ. ನಾವು ದರವನ್ನು ನಿಗದಿಪಡಿಸಿದ್ದೇವೆ. ತಾವು ಹೇಳಿದ್ದೀರಿ. ನಾನು ತಮ್ಮ ಪ್ರಶ್ನೆಗೆ ಉತ್ತರವನ್ನು ಕೂಡ ಕೊಡುತ್ತೇನೆ. ನಾವು ಗೊಬ್ಬರದ ಬೆಲೆಯನ್ನು ನಿಗದಿಪಡಿಸಿರತಕ್ಕ ಮ್ಯಾಕ್ಸಿಮಮ್ ರೀಟೇಲ್ ಪ್ರೈಸ್ ಏನು ಇದೆ, ಇದನ್ನು ಪುನರ್ ವಿಮರ್ಶೆ ಮಾಡತಕ್ಕದ್ದು ಇಲ್ಲ, ಮಾಡುವುದಿಲ್ಲ. ಅದನ್ನು ಅವರಿಗೆ ನಾನು ಬಹಳ ಸ್ಪಷ್ಟವಾಗಿ ಹೇಳಿದ್ದೇನೆ. ಅವರದು ಬೇರೆ ಕೆಲವು ಬೇಡಿಕೆಗಳು ಇದ್ದಾವೆ. ಉದಾಹರಣೆಗೆ ಟರ್ನ್ ಓವರ್ ಟ್ಯಾಕ್ಸನ್ನು ತೆಗೆಯಬೇಕು ಎನ್ನತಕ್ಕದ್ದನ್ನು ಸಹ ಹೇಳಿದ್ದಾರೆ. ಅದನ್ನು ನಾನು ಒಬ್ಬನೇ ತೀರ್ಮಾನ ಮಾಡತಕ್ಕದ್ದಲ್ಲ. ಸಂಪುಟ ಇದೆ. ಮಾನ್ಯ ಅರ್ಥ ಸಚಿವರು ಇದ್ದಾರೆ, ನಾನು ಅವರ ಗಮನಕ್ಕೆ ತರುತ್ತೇನೆ, ನೀವು ಬರವಣಿಗೆಯಲ್ಲಿ ಕೊಡಿ ಎಂದು ಅವರಿಗೆ ಹೇಳಿದ್ದೇನೆ. ಅವರು ಇನ್ನೂ ಕೊಟ್ಟಿಲ್ಲ, ಬರವಣಿಗೆಯಲ್ಲಿ ಬಂದಿಲ್ಲ. ನೀವು ಹೇಳಿರತಕ್ಕ ವಿಚಾರಕ್ಕೆ ಈಗ ಅವರು ಒಪ್ಪುತ್ತಾರೋ ಬಿಡುತ್ತಾರೋ ಗೊತ್ತಿಲ್ಲ, ಈಗ ಮಳೆ ಬಿದ್ದಿದೆ, ನಾವು ಈ ರೇಟಿನ ಗೊಂದಲದಲ್ಲಿ ರೈತರನ್ನು ಸಿಗಿಸುವುದಕ್ಕೆ ತಯಾರಿಲ್ಲ. ಅದಕ್ಕೆ ಪರ್ಯಾಯವಾದಂತಹ ವ್ಯವಸ್ಥೆಯನ್ನು ನಾವು ಮಾಡಿದ್ದೇವೆ. ಅದೇನು ಎಂದರೆ ನೇರ ಗೊಬ್ಬರಗಳನ್ನು ಮಿಶ್ರ ಮಾಡತಕ್ಕಂತಹ ಒಂದು ಕಾರ್ಯಕ್ರಮ ಹಾಕಿದ್ದೇವೆ. ನೇರ ಗೊಬ್ಬರಗಳು ಅಂದರೆ ಯೂರಿಯಾ, ಡಿಎಪಿ, ಸ್ಯೂರೋ ಟೈಂ ಪೊಟ್ಯಾಶನ್ನು ಸ್ವಲ್ಪ ದಯವಿಟ್ಟು ಕೇಳಿ. ನೀವು ಹೇಳಿದ್ದನ್ನು ನಾನು ಕೇಳಿದ್ದೇನೆ. ತಾವು ದಯವಿಟ್ಟು ಅಂತಹ ಸೌಜನ್ಯವನ್ನು ನನಗೂ ಕೂಡ ದಯವಿಟ್ಟು ತೋರಿಸಿ. ನೇರ ಗೊಬ್ಬರಗಳನ್ನು ಈಗ 19:19 ಎಂದು ಇದೆ. ಆ 19:19ಕ್ಕೆ ರೈತರೇ ಮಿಶ್ರ ಮಾಡಿಕೊಂಡರೆ ಸುಮಾರು 90ರಿಂದ 95 ರೂಪಾಯಿ ಅವರಿಗೆ ಕಡಿಮೆ ಆಗುತ್ತದೆ. ವ್ಯಾಪಕವಾಗಿ ಈ ಕಾರ್ಯಕ್ರಮವನ್ನು ನಾವು

ಹಾಕಿಕೊಂಡಿದ್ದೇವೆ.

ಶ್ರೀ ಬಿ.ಎಸ್.ಯಡಿಯೂರಪ್ಪ:- ಅವರು ಏನು ಹೇಳುತ್ತಿದ್ದಾರೆ, ನಾವೇನು ಕೇಳುತ್ತಿದ್ದೇವೆ ಸಾರ್. ಇವತ್ತು ನಾನು ಕೇಳುವುದು, ನೀವೇನು ನಿನ್ನೆ ಸನ್ಮಾನ್ಯ ಮುಖ್ಯಮಂತ್ರಿಗಳನ್ನು ಕರೆದುಕೊಂಡು ಹೋಗಿ ಆ ಮರಳು, ಸಿಮೆಂಟ ಮಿಕ್ಸ್ ಮಾಡುವುದನ್ನು ತೋರಿಸುವ ಫೋಟೋ ಬಂದಿದೆ ನಾವು ಈ ಕೆಲಸ ಕಳೆದ 16 ವರ್ಷಗಳಿಂದ ಮಾಡುತ್ತಿದ್ದೇವೆ. ಯಾವುದು ಬೆಲೆ ಕಡಿಮೆ ಇದೆ, ಅದನ್ನು ಮಿಕ್ಸ್ ಮಾಡಿ ರೈತನ ಹೊಲಕ್ಕೆ ಹಾಕಿಕೊಳ್ಳುವುದನ್ನು ನಾವು ಮಾಡುತ್ತಲೇ ಇದ್ದೇವೆ. ಆದರೆ ಇವತ್ತೇನು 17:15:18 ಬೇರೆ ಗೊಬ್ಬರಗಳು ಇದ್ದಾವೆ, ಆ ಮಾರ್ಕೆಟ್ ಬೆಲೆ ನೀವು ಒಪ್ಪಂದ ಮಾಡಿಕೊಳ್ಳದೇ ಇದ್ದರೆ, ಆ ಗೊಬ್ಬರವನ್ನು ನೀವು ಉಪಯೋಗ ಮಾಡದೇ ಇದ್ದರೆ, ಅವನಿಗೆ ಸಬ್ಸಿಡಿ ಸಿಗುವುದಿಲ್ಲ. ನೀವೇನು ಮಿಕ್ಸ್ ಮಾಡಿಕೊಂಡು ಹೋಗಿ ಎನ್ನತಕ್ಕ ಉಪದೇಶವಲ್ಲ ನಮಗೆ ಬೇಕಾಗಿರುವುದು. ಈಗ ಯಾವ ಕಾರ್ಖಾನೆಯಿಂದ ಗೊಬ್ಬರವನ್ನು ಹತ್ತಾರು ವರ್ಷಗಳಿಂದ ಉಪಯೋಗ ಮಾಡಿಕೊಂಡಿದ್ದೇವೆ, ಆ ಗೊಬ್ಬರಕ್ಕೆ ಒಂದು ಬೆಲೆ ನಿಗದಿ ಮಾಡಿ. ಅವರು ಒಪ್ಪಲಿಲ್ಲ ಎಂದರೆ ಅವರನ್ನು ಬಗ್ಗಿಸಿ, ಅವನ ಮೇಲೆ ಕ್ರಮ ತೆಗೆದುಕೊಳ್ಳಿ ಅದಕ್ಕೆ ಆಲ್ಟರ್‌ನೇಟೀವ್ ವ್ಯವಸ್ಥೆ ಮಾಡಿ. ಇಲ್ಲದೇ ಇದ್ದರೆ ರಾಜ್ಯದ ರೈತ ಏನು ಮಾಡಬೇಕು ಅಕ್ಕಪಕ್ಕದ ರಾಜ್ಯದಲ್ಲಿ ವ್ಯವಸ್ಥೆ ಇದೆ. ನಾವೇಕಿ ಸಫರ್ ಮಾಡಬೇಕು? ಇದನ್ನು ಕೇಳಿದರೆ ಕಡಿಮೆ ಬೆಲೆಗೆ ಇವತ್ತು ಎಲ್ಲಿ ಗೊಬ್ಬರವನ್ನು ತೆಗೆದುಕೊಂಡು ಅದನ್ನು ತಿರುಗಿಸಿ, ಒಂದು ಚೀಲಕ್ಕೆ ಹಾಕುವಂಥ ಹೊಸ ವ್ಯವಸ್ಥೆ ಮಾಡಿದರೆ ಹೇಗೆ? ರೈತರಾಗಿ ನೀವು ಹೇಳಿ ಈ ಸಮಸ್ಯೆ ಬಗೆಹರಿಯುತ್ತದೆಯೇ?

ಶ್ರೀ ಸಿ.ಭೈರೇಗೌಡ:- ಈ ತರಹ ಮಧ್ಯೆ ಮಾತನಾಡಿದರೆ ನಾನು ಉತ್ತರ ಕೊಡುವುದಕ್ಕೆ ಹೋಗುವುದಿಲ್ಲ.

ಶ್ರೀ ಬಿ.ಎಸ್.ಯಡಿಯೂರಪ್ಪ:- ನೀವೇನಾದರೂ ಸರ್ಕಾರದ ಕಡೆಯಿಂದ ಗೊಬ್ಬರದ ಕಾರ್ಖಾನೆ ಪ್ರಾರಂಭ ಮಾಡುತ್ತಿದ್ದೀರೋ ಎಲ್ಲಾ ಮಿಕ್ಸ್ ಮಾಡಿ ಕಡಿಮೆ ರೇಟಿಗೆ ಕೊಡುವುದನ್ನು ನಾಳೆಯಿಂದ ಜಾರಿ ಮಾಡಿದರೆ ನಾನು ಒಪ್ಪಿಕೊಳ್ಳುತ್ತೇನೆ.

ಶ್ರೀ ಸಿ.ಎಚ್.ವಿಜಯಾ ಶಂಕರ್:- ಮಿಕ್ಸರನ್ನು ಎಲ್ಲರೂ ಕೂಡ ಉಪಯೋಗ ಮಾಡುವುದಿಲ್ಲ.

ಅಧ್ಯಕ್ಷರು:- ಅದು ಡಿಫರೆಂಟ್ ಥಿಂಗ್.

ಶ್ರೀ ಎ.ರಾಮದಾಸ್:- ಇವರು ಹೇಳುವುದು ಸಾಧ್ಯವೇ ಆಗುವುದಿಲ್ಲ.

ಶ್ರೀ ಸಿ.ಎಚ್.ವಿಜಯಾ ಶಂಕರ್:- ಅವರು ಒಂದು ಮೂಟೆ ಬಗ್ಗೆ ಹೇಳಿದರು. ಸಣ್ಣ ರೈತ ಒಂದು ಮೂಟೆ ಎರಡು ಮೂಟೆ ತೆಗೆದುಕೊಂಡು ಹೋಗಿ, ಎಲ್ಲಿ ಮಿಕ್ಸ್ ಮಾಡಬೇಕು? ಇದು ಸಾಧ್ಯವಿಲ್ಲದ್ದು.

ಅಧ್ಯಕ್ಷರು:- ಮಾನ್ಯ ಭೈರೇಗೌಡರೆ, ಎಲ್ಲಾ ಸದಸ್ಯರ ಆತಂಕ ಏನು ಅಂದರೆ ಕೇಂದ್ರ

ಸರ್ಕಾರದವರು ಒಂದು ನಿರ್ಣಯ ತೆಗೆದುಕೊಂಡು ಕೆಲವು ಗೊಬ್ಬರಗಳಿಗೆ ಬೆಲೆ ಇಳಿಸಿದ್ದಾರೆ. ಅದು ಜಾರಿಗೆ ಬಂದರೆ, ನಮಗೆ ಹೆಚ್ಚಿನ ಸಬ್ಸಿಡಿ ಸಿಗುತ್ತದೆ. ಇಲ್ಲಿ ವರ್ತಕ ಸಮೂಹ ಯಾರಿದ್ದಾರೆ ರಾಜ್ಯದಲ್ಲಿ ಅವರು ಈ ನಿಯಮದೊಡನೆ ಸಹಕರಿಸಲು ಸಿದ್ಧರಾಗಿಲ್ಲ. ಅನೇಕ ಕಡೆ ಬಾಗಿಲು ಮುಚ್ಚಿಕೊಂಡು ಹೋಗುತ್ತಾರೆ, ಕೆಲವು ಕಡೆ ಇಲ್ಲ ಎಂದು ಹೇಳುತ್ತಾರೆ. ಒಟ್ಟಾರೆ ನಮಗೆ ಸಮಯಕ್ಕೆ ಸರಿಯಾಗಿ ಗೊಬ್ಬರ ಸಿಗುವುದಿಲ್ಲ. ಆದ್ದರಿಂದ ಸರ್ಕಾರ ಮಾಡಿದಂತಹ ಒಂದು ಹೊಸ ಸುಧಾರಿತ ನೀತಿಯಿಂದ ಪ್ರಯೋಜನ ನಮಗೆ ಸಿಗುತ್ತಿಲ್ಲ. ಆದ್ದರಿಂದ ವರ್ಕರ್ಸ್ ಕ್ಲಾಸ್, ಮರ್ಚೆಂಟ್ ಕ್ಲಾಸ್ ಅಥವಾ ಟ್ರೇಡಿಂಗ್ ಕ್ಲಾಸ್ ಯಾರು ಇದ್ದಾರೆ, ಅವರ ಜೊತೆ ಮಾತುಕತೆ ಮಾಡುತ್ತೀರೋ ಅಥವಾ ಕಾನೂನು ಉಪಯೋಗಿಸುತ್ತೀರೋ?

ಶ್ರೀ ಬಿ.ಎಸ್.ಯಡಿಯೂರಪ್ಪ:- ಮಾನ್ಯ ಅಧ್ಯಕ್ಷರೆ, ಕಾರ್ಖಾನೆಯ ಮಾಲೀಕ ಈ ಗೊಬ್ಬರ ಏನು ತಯಾರು ಮಾಡುತ್ತಿದ್ದಾನೆ, ಅವನು ಏನೋ ಒಂದು ರೇಟ್‌ಗೆ ಫಿಕ್ಸ್ ಮಾಡಿದ್ದಾನೆ, ಅದಕ್ಕೆ ಒಪ್ಪುತ್ತಿಲ್ಲ. ನಾನು ಅಭಿನಂದನೆ ಸಲ್ಲಿಸುತ್ತೇನೆ, ಮಾನ್ಯ ಸಚಿವರಿಗೆ ಆದರೆ.

ಅಧ್ಯಕ್ಷರು:- ಮಾನ್ಯ ಡಿ.ಆರ್.ಪಾಟೀಲ್ ಹೇಳಿದ್ದು ಸರಿ ಅಥವಾ ನಾನು ಹೇಳಿದ್ದು ಸರಿಯೇ?

ಶ್ರೀ ಬಿ.ಎಸ್.ಯಡಿಯೂರಪ್ಪ:- ಅದೂ ಸರಿ ಇದೆ. ತಾವು ಹೇಳಿದಂತಹ ಮೊದಲ ಭಾಗವೂ ಸರಿ ಇದೆ. ತಾವು ಹೇಳಿದಂತೆ ಇರುವ ಗೊಬ್ಬರವನ್ನು ವರ್ತಕರು ಸರಿಯಾಗಿ ಕೊಡುತ್ತಿಲ್ಲ. ಅನ್ಯಾಯ ಆಗುತ್ತಿದೆ, ಇದೊಂದು ಭಾಗ. ಎರಡನೆಯದು ಯಾವ ಕೈಗಾರಿಕೆಯವನು ಗೊಬ್ಬರವನ್ನು ತಯಾರು ಮಾಡುತ್ತಾನೆ, ಆತ ಪ್ರತಿ ವರ್ಷ ಏರಿಸಿಕೊಂಡು ಹೋಗುತ್ತಿದ್ದಾನೆ. ಕಾಂಪ್ಲೆಕ್ಸ್ ಗೊಬ್ಬರ 50 ಕೇಜಿಗೆ 30, 40 ರೂಪಾಯಿ ಒಂದೊಂದರಲ್ಲಿ ಜಾಸ್ತಿ ಆಗಿದೆ. ಸರ್ಕಾರ ಒಂದು ರೇಟ್ ಇಟ್ಟಿದೆ. ಹೊಸ ಪದ್ಧತಿಯ ಅನಿಷ್ಟ ಏನು ಆಗಿದೆ ಎಂದರೆ ಆತ ಪ್ರತಿ ವರ್ಷ ಯಾವ್ಯಾವುದೋ ಕಾರಣಕ್ಕೆ ಗೊಬ್ಬರದ ಬೆಲೆ ಫಿಕ್ಸ್ ಮಾಡುತ್ತಾನೆ. ಸರ್ಕಾರದ ಜೊತೆ ಮಾತುಕತೆ ಮಾಡಿ ಒಂದು ರೇಟ್ ಫಿಕ್ಸ್ ಮಾಡಿ ಇದು ಒಂದು ಕ್ವಿಂಟಾಲ್ 300-400 ರೂಪಾಯಿ ಇದ್ದದ್ದು 1000ಕ್ಕೆ ಹತ್ತಿರ ಬಂದು ಬಿಟ್ಟಿದೆ. ರೈತ ಉಳಿಯದೇ ಇರತಕ್ಕ ಪರಿಸ್ಥಿತಿ ಇದೆ. ನನ್ನ ಪ್ರಶ್ನೆ ಏನು ಎಂದರೆ ಸರ್ಕಾರದವರು ಸಬ್ಸಿಡಿಯನ್ನು ಉಪಯೋಗ ಮಾಡಿಕೊಳ್ಳಬೇಕಾದರೆ ಇಲ್ಲಿ ರೇಟ್ ಏನು ಇದೆ? ಗೊಬ್ಬರ ತಯಾರು ಮಾಡತಕ್ಕವನು ನಿಗದಿ ಮಾಡಿದ್ದಾನೆ ನೀವು ಒಪ್ಪಂದ ಮಾಡಿಕೊಳ್ಳಬೇಕು. ಕಡಿಮೆ ಮಾಡಲಿ, ಜಾಸ್ತಿ ಮಾಡಲಿ, ಅದು ನಿಮಗೆ ಬಿಟ್ಟಿದ್ದುದು. ಹೊರ ರಾಜ್ಯದವರು ಏನು ಮಾಡಿದ್ದಾರೆ ಎಂದರೆ ಅದನ್ನು ಆಧಾರವಾಗಿಟ್ಟುಕೊಂಡು ಅದರಂತೆ ತೀರ್ಮಾನಕ್ಕೆ ಬಂದು ಆ ಗೊಬ್ಬರ ನಾಳೆಯಿಂದ ರೈತರಿಗೆ ಸಬ್ಸಿಡಿ ಮುಗಿಯುವುದರೊಳಗೆ ಸಿಗಬೇಕು. ಅದೇ ನಮ್ಮ ಪರಿಹಾರ. ಅವರೇನು ಹೇಳುತ್ತಿದ್ದಾರೆ? ಇನ್ನೇನೋ ಮಿಕ್ಸ್ ಮಾಡಿ, ಏನೋ ಅಲ್ಲಿ ತೋರಿಸಿದ್ದೇವೆ. ಅದು ಒಂದು ಎಕರೆ ಎರಡು ಎಕರೆಗೆ ಇಲ್ಲ.

ಶ್ರೀ ಸಿ.ಎಚ್.ವಿಜಯಾ ಶಂಕರ್:- ಮಾನ್ಯ ಮಂತ್ರಿಗಳು ನೇರವಾದ ಗೊಬ್ಬರ ಹಾಗೂ ಮಿಕ್ಸರ್ಸ್ ಬಗ್ಗೆ ಹೇಳುತ್ತಿದ್ದಾರೆ. ಕಾಂಪ್ಲೆಕ್ಸ್ ಬೇರೆ ಮಿಕ್ಸರ್ಸ್ ಬೇರೆ. ಮಾನ್ಯ ಮಂತ್ರಿಗಳು ಮಿಕ್ಸರ್ಸ್ ವಿಚಾರ ಹೇಳುತ್ತಿದ್ದಾರೆ. ಮಿಕ್ಸರ್ಸನ್ನು ಎಲ್ಲರೂ ಉಪಯೋಗ ಮಾಡುವುದಿಲ್ಲ. ಕಾಂಪ್ಲೆಕ್ಸನ್ನು ಕೆಲವರು ಉಪಯೋಗ ಮಾಡುತ್ತಾರೆ. ಕಾಂಪ್ಲೆಕ್ಸ್ ಕೂಡ ನೇರವಾಗಿ ಕಂಪನಿಯಿಂದ ಬರುತ್ತದೆ, ಅದರ ಬೆಲೆ ನಿಗದಿ ಆಗಬೇಕು. ಮತ್ತು ಎಂಓಪಿ, ಯೂರಿಯ ಡಿಎಪಿ, ಎನ್‌ಓಡಿ ಈ ರೀತಿ ನೇರವಾದ ಗೊಬ್ಬರಗಳನ್ನು ರೈತರೇ ತೆಗೆದುಕೊಂಡು ಹೋಗಿ ಉಪಯೋಗ ಮಾಡುವುದಿದೆ, ಅದರ ಬೆಲೆ ಇವರು ನಿಗದಿ ಮಾಡಲಿಲ್ಲ ಎಂದರೆ ಖಂಡಿತವಾಗಿಯೂ ಕೂಡ ಕಾಳಸಂತೆಯಲ್ಲಿ ದುರುಪಯೋಗ ಆಗುವಂಥ ವ್ಯವಸ್ಥೆ ಇದೆ. ಈ ನೇರ ಗೊಬ್ಬರಗಳ ಬೆಲೆ ನಿಗದಿ ಮಾಡಿ, ಟರ್ನ್ ಓವರ್ ವಿಚಾರ ಇಟ್ಟುಕೊಳ್ಳದೇ, ನಮಗೆ ಸ್ಪಷ್ಟ ಮಾಡಬೇಕು ಎಂದು ಕೇಳಿಕೊಳ್ಳುತ್ತೇನೆ.

ಶ್ರೀ ಸಿ.ಭೈರೇಗೌಡ:- ಈಗ ನಾನು ಹೇಳುತ್ತೇನೆ. ತಾವು ಏನಾದರೂ ಹೇಳುವುದು ಇದ್ದರೆ ಆ ನಂತರ ಹೇಳಿ.

ಶ್ರೀ ಎ.ರಾಮದಾಸ್:- ಕಾನೂನು ತೊಡಕು ಇರುವಂತಹದು ಏನು ಮಾನ್ಯ ಸಚಿವರು ಹೇಳಿದ್ದಾರೆ. ಅದು ನಿಜ. ಆದರೆ ಕಾನೂನಿನ ವ್ಯಾಪ್ತಿಯೊಳಗೆ ಗೊಬ್ಬರದ ಮಾಲೀಕನಾಗಲೀ ಅಥವಾ ಫ್ಯಾಕ್ಟರಿ ಮಾಲೀಕನನ್ನು ತರುವಂತಹ ಒಂದು ಪ್ರಯತ್ನ ನಿಮ್ಮ ಕಡೆಯಿಂದ ಆಗದೇ ಹೋದರೆ ನಮ್ಮ ಇಡೀ ರಾಜ್ಯದ ರೈತರಿಗೆ ತೊಂದರೆ ಆಗುತ್ತದೆ. ಅಲ್ಲೂ ಕೂಡ ಅನ್‌ಎಜುಕೇಟೆಡ್ ರೈತರು ಇರುವಂತಹವರಿಗೆ ಮಿಕ್ಸ್ ಮಾಡುವಂತಹ ಪ್ರಮಾಣ ಖಂಡಿತವಾಗಿಯೂ ನಮ್ಮ ಹಳ್ಳಿಯಲ್ಲಿ ಗೊತ್ತಿಲ್ಲ. ಯಾರೋ ಎಜುಕೇಟೆಡ್ ಇರುವಂತಹ ರೈತರು ಮಿಕ್ಸ್ ಮಾಡಿ, ಪಡೆದುಕೊಂಡರೆ ನಿಜವಾಗಿ ರೇಟ್ ಕಡಿಮೆ ಆಗುತ್ತದೆ. ನಾವು ಕೂಡ ಬೇರೆ ಬೇರೆ ಪ್ರಮಾಣದ ಗೊಬ್ಬರವನ್ನು ಮಿಕ್ಸ್ ಮಾಡುತ್ತೇವೆ. ಆದರೆ ಎಲ್ಲಾ ರೈತರಿಗೂ ಏನೂ ಗೊತ್ತಿಲ್ಲದೇ ಇರುವುದರಿಂದ ಮಿಕ್ಸ್ ಮಾಡುವುದಕ್ಕೆ ಆಗುವುದಿಲ್ಲ. ತಕ್ಷಣ ನೀವು ಇದನ್ನು ಮಾಡದೇ ಹೋದರೆ ನಮ್ಮ ಸಬ್ಸಿಡಿಯನ್ನು ನಾವು ಬಳಕೆ ಮಾಡಿಕೊಳ್ಳುವುದಕ್ಕೆ ಖಂಡಿತವಾಗಿ ಸಾಧ್ಯವಿಲ್ಲ. ತಮ್ಮಂತಹವರು ಇಂತಹ ಸ್ಥಾನದಲ್ಲಿ ಇರುವುದರಿಂದ ತಕ್ಷಣ ಇದಕ್ಕೆ ಏನಾದರೂ ಪರಿಹಾರ ಕಂಡು ಹಿಡಿಯಬೇಕು.

ಶ್ರೀ ಸಿ.ಭೈರೇಗೌಡ:- ನೇರವಾದ ಗೊಬ್ಬರಗಳು ಏನು ಇವೆ, ಡಿಎಪಿ ತಯಾರು ಮಾಡತಕ್ಕಂಥವರು, ಸೂಪರ್ ಫಾಸ್ಪೇಟ್ ತಯಾರು ಮಾಡತಕ್ಕಂಥವರು, ಪೊಟ್ಯಾಷ್ ತಯಾರು ಮಾಡತಕ್ಕಂಥವರು ನಮ್ಮ ಈ ಸಬ್ಸಿಡಿ ವ್ಯಾಪ್ತಿಯಲ್ಲಿ ಬಂದಿದ್ದಾರೆ. ಅವರು ಒಪ್ಪಿದ್ದಾರೆ. ನಾವು ನಿಗದಿ ಮಾಡತಕ್ಕ ಬೆಲೆಗೆ ಮಾರಾಟ ಮಾಡುವುದಕ್ಕೆ ಅವರು ಒಪ್ಪಿದ್ದಾರೆ. ಕೆಲವು ಕಾಂಪ್ಲೆಕ್ಸ್ ಯಾವುದು ಇದೆ, 19:19 ಮತ್ತು 17:15 ಇವು ಇನ್ನೂ ಬಂದಿಲ್ಲ. ನಿನ್ನೆ ದಿನ ನನ್ನ ಹತ್ತಿರ ಬಂದಿದ್ದರು. ನೀವು ಕಡಿಮೆ ದರ ಫಿಕ್ಸ್ ಮಾಡಿದ್ದೀರಿ ಎಂದು ನನಗೆ ಹೇಳಿದರು. ನಾನು ಇದನ್ನು ರಿವೈಸ್ ಮಾಡತಕ್ಕ ಪ್ರಶ್ನೆ ಇಲ್ಲ ಎಂದು ಹೇಳಿದೆ. ನಾನು ಆಗಲೇ ಹೇಳಿದ್ದೇನೆ. ಆದರೆ ಟರ್ನ್ ಓವರ್ ಟ್ಯಾಕ್ಸ್ ಹಾಕುವುದು ಇದರ ಮೇಲಿರತಕ್ಕಂಥವರು, ಅದನ್ನು ತೆಗೆದರೆ ನಮಗೆ ಏನಾದರೂ ಸ್ವಲ್ಪ ಲಾಭ

ಸಿಗುತ್ತದೆ, ಇಲ್ಲದಿದ್ದರೆ ನಷ್ಟ ಆಗುತ್ತದೆ ಎನ್ನುವ ಮಾತನ್ನು ಹೇಳಿದ್ದಾರೆ. ಆ ವಿಚಾರವನ್ನು ಕೂಡ ನಾನು ಹೇಳಿದ್ದೇನೆ. ನಾನು ಒಬ್ಬನೇ ಅಲ್ಲ, ತೀರ್ಮಾನ ಮಾಡತಕ್ಕವನು. ಮಾನ್ಯ ಅರ್ಥ ಸಚಿವರು ಇದ್ದಾರೆ, ಸಂಪುಟ ಇದೆ, ಅಲ್ಲಿ ತೀರ್ಮಾನ ಮಾಡತಕ್ಕ ವಿಚಾರ ಎಂಬ ಮಾತನ್ನು ಕೂಡ ಹೇಳಿದ್ದೇನೆ. ನೀವು ಬರವಣಿಗೆಯಲ್ಲಿ ಕೊಡಿ ಎಂದು ಹೇಳಿದ್ದೇನೆ. ಅವರು ಏನು ಕೊಡುತ್ತಾರೆ, ಅದು ಬಂದ ಮೇಲೆ ಸಂಬಂಧಪಟ್ಟವರ ಗಮನಕ್ಕೆ ತರುತ್ತೇನೆ. ಈಗ ನಿಗದಿಪಡಿಸಿರತಕ್ಕಂಥ ಬೆಲೆಯನ್ನು ಪುನರ್ ವಿಮರ್ಶೆ ಮಾಡತಕ್ಕ ಪ್ರಶ್ನೆ ಇಲ್ಲ. ಕಾನೂನು ತೊಡಕನ್ನೂ ಹೇಳಿದ್ದೇನೆ. ಒಂದು ವೇಳೆ ಅವರು ನಮ್ಮ ಈ ಸಬ್ಸಿಡಿ ವ್ಯಾಪ್ತಿಯಲ್ಲಿ ಬಂದರೆ, ಅವರ ಮೇಲೆ ಕಾನೂನು ಚಲಾವಣೆ ಮಾಡುವುದಕ್ಕೆ ಸಾಧ್ಯ, ಬರದೇ ಇದ್ದರೆ ಸಾಧ್ಯವಿಲ್ಲ. ಆದರೆ ರೈತರನ್ನು ನಾವು ಕೈಬಿಡುವುದಕ್ಕೆ ಸಿದ್ಧ ಇಲ್ಲ. ಅದಕ್ಕೋಸ್ಕರವಾಗಿ ನಿನ್ನೆ ನಾವು ಪ್ರಾರಂಭ ಮಾಡಿರತಕ್ಕ ಕಾರ್ಯಕ್ರಮ ವ್ಯಾಪಕವಾಗಿದೆ. ಪ್ರತಿ ಒಂದು ಹಳ್ಳಿ, ಪ್ರತಿ ಒಂದು ಹೋಬಳಿ ಮಟ್ಟದಲ್ಲಿಯೂ ಸಹ ಈ ಗೊಬ್ಬರವನ್ನು ಮಿಕ್ಸ್ ಮಾಡತಕ್ಕ ಕಾರ್ಯಕ್ರಮವನ್ನು ನಾವು ಮಾಡುವವರು ಇದ್ದೇವೆ. ಇಲಾಖೆ ಮತ್ತು ಕರ್ನಾಟಕ ಆಗ್ರೋ ಇಂಡಸ್ಟ್ರೀಸ್ ಕಾರ್ಪೋರೇಷನ್ ಇದೆಯಲ್ಲಾ ಇದರ ಪತಿಯಿಂದ. ತಾವು ಹೇಳಿದ ಹಾಗೆ ಅದೇನೂ ದೊಡ್ಡ ವಿಚಾರ ಅಲ್ಲ. ಒಂದೆರಡು ಕಾಂಕ್ರೀಟ್ ಮಿಕ್ಸ್ ಇದ್ದರೆ, ಎರಡು ಮೂರು ಗಂಟೆಯೊಳಗೆ ಒಂದು ಲಾರಿ ಗೊಬ್ಬರವನ್ನು ಮಿಕ್ಸ್ ಮಾಡುವುದಕ್ಕೆ ಸಾಧ್ಯ ಇದೆ.

ಶ್ರೀ ಬಿ.ಎಸ್.ಯಡಿಯೂರಪ್ಪ:- ಯಾರಾದರೂ ನಿಮ್ಮ ಟೆಕ್ನಿಕಲ್ ಎಕ್ಸ್‌ಪರ್ಟ್ಸ್ ಇದ್ದರೆ ಕೇಳಿ. ಈ ತರಹ ಮಾಡಿ ಒಂದು ಅಥವಾ ಎರಡು ಗಂಟೆಯೊಳಗೆ ಹೊಲಕ್ಕೆ ಹಾಕಬೇಕು. ಅದನ್ನು ಚೀಲದಲ್ಲಿ ಹಾಕಿದರೆ ಗಂಟಾಗಿ ನೀರಾಗಿ, ಹಾಳು ಬಿದ್ದು ಹೋಗುತ್ತಿದೆ. ಸಾಮಾನ್ಯ ಜ್ಞಾನ ನಿಮಗೆ ಗೊತ್ತಿರಬೇಕಲ್ಲ.

ಶ್ರೀ ಸಿ.ಭೈರೇಗೌಡ:- ಈಗ ಅದೇ ಬಂದಿರುವುದು ನಮಗೆ ನಿಮಗೆ ತಾಪತ್ರಯ. ಇವತ್ತು ಬಿತ್ತನೆ ನಡೆಯುತ್ತಿದೆ. ಅದು ಎರಡು ಮೂರು ದಿವಸ ಮೂಟೆಯಲ್ಲಿ ಇದ್ದರೆ ಅದು ಕೂಡ ಗೆಡ್ಡೆ ಕಟ್ಟುತ್ತದೆ. ಅಷ್ಟೂ ಕೂಡ ನನಗೆ ಗೊತ್ತಿಲ್ಲವಾ ಸ್ವಾಮಿ. ಅಷ್ಟು ಗೊತ್ತಿಲ್ಲವೇ ಸ್ವಾಮಿ. ನಾನು ಕೂಡ ಮಣ್ಣಿನಿಂದ ಇಲ್ಲಿಗೆ ಬಂದಿರುವುದು ಸ್ವಲ್ಪ ದಯವಿಟ್ಟು ಕೇಳಿ.

ಶ್ರೀ ಬಿ.ಎಸ್.ಯಡಿಯೂರಪ್ಪ:- ಮಣ್ಣಿನಿಂದ ಬಂದಿಲ್ಲ, ವಾಪಸ್ ಹೋಗುವುದು ಮಣ್ಣಿಗೆ. ತಾಯಿ ಹೊಟ್ಟೆಯಿಂದ ಬರುವುದು ಮಣ್ಣಿಗೆ ವಾಪಸ್ ಹೋಗುತ್ತೇವೆ.

ಶ್ರೀ ಚಂದ್ರಕಾಂತ ಬೆಲ್ಲದ್:- ಈಗ ಮಾನ್ಯ ಸಚಿವರು ಪ್ರತಿ ಹೋಬಳಿಗೂ ಮಿಕ್ಸ್ ಮಾಡಿ ಕೊಡುವ ವಿಚಾರ ಏನು ಹೇಳುತ್ತಿದ್ದಾರೆ, ಇದು ಸಾಧ್ಯ ಇಲ್ಲ. ಇದು ಸಾಧ್ಯ ಆಗುವುದಿಲ್ಲ.

MR.SPEAKER:- By way of reference there appears to be some confusion.... ಸೋಮವಾರ ದಿವಸ ಅರ್ಧ ಗಂಟೆ ಈ ಕುರಿತು

ಚರ್ಚೆಗೆ ತೆಗೆದುಕೊಳ್ಳೋಣ.

ಶ್ರೀ ಬಿ.ಎಸ್. ಯಡಿಯೂರಪ್ಪ:- ಇಲ್ಲ, ಇದರ ಬಗ್ಗೆ ಅವರಿಗೆ ಚರ್ಚೆ ಬೇಕಾಗಿಲ್ಲ. ಅವರಿಗೆ ಎಲ್ಲಾ ಸಂಗತಿಗಳೂ ಗೊತ್ತಿದೆ. ಹೋದ ವರ್ಷ 60-70 ಕೋಟಿ ರೂಪಾಯಿಗಳಷ್ಟು ಸಬ್ಸಿಡಿ ಬಂದಿದ್ದಂಥ ಸಂದರ್ಭದಲ್ಲಿ ಇದೇ ಕಾರಣಕ್ಕಾಗಿ ಉಪಯೋಗಿಸಿಕೊಳ್ಳದೆ..... ಇದರ ಬಗ್ಗೆ ಚರ್ಚಿಸುವಂಥಾದ್ದೇನೂ ಇಲ್ಲ, ಇದರ ಬಗ್ಗೆ ಅವರಿಗೆಲ್ಲಾ ಗೊತ್ತಿದೆ. ನಾನು ನಾಳೆ ಶುಕ್ರವಾರ, ಶನಿವಾರ, ಭಾನುವಾರ ನನ್ನ ಕ್ಷೇತ್ರಕ್ಕೆ ಹೋಗಿ ರೈತರನ್ನು ಕೇಳುತ್ತೇನೆ. ಸಬ್ಸಿಡಿ ಬಂದಿದೆ, ನಾಳೆ ಹೊಲ, ಗದ್ದೆಗಳಿಗೆ ಹಾಕಲು 17:17, 15:15 ಮಾಡಿದಂಥ ಕಾಂಪ್ಲೆಕ್ಸ್ ಗೊಬ್ಬರ ಬೇಕಾಗಿರುವುದರಿಂದ ಸಬ್ಸಿಡಿ ಸಿಗುತ್ತದೆಯೇ? ಇಲ್ಲವೇ ಸಬ್ಸಿಡಿ ಸಿಗುವುದಕ್ಕೆ ನೀವು ಏನು ವ್ಯವಸ್ಥೆ ಮಾಡಿದ್ದೀರಿ? ಗೊಬ್ಬರವನ್ನು ಕಲಸುಮೇಲೋಗರ ಮಾಡಿ ಬರೆಸುವುದು ಬೇರೆ ವ್ಯವಸ್ಥೆಯಾಯಿತು. ಅದನ್ನು ರೈತರು ಮಾಡಿಕೊಳ್ಳುತ್ತಾರೆ. ನಿಮ್ಮ ಸರ್ಕಾರ ಅದರ ಬಗ್ಗೆ ಏನು ವ್ಯವಸ್ಥೆ ಮಾಡುತ್ತಿದೆ?

ಅಧ್ಯಕ್ಷರು:- ನಾನು ಏನು ಹೇಳುತ್ತಿದ್ದೇನೆಂದರೆ, ಸದನದ ವೇಳೆಯನ್ನು ಉಳಿಸುವುದಕ್ಕೋಸ್ಕರ ಇವೊತ್ತು ಸಂಜೆ ಮಾನ್ಯ ಕೃಷಿ ಸಚಿವರ ಕೊಠಡಿಯಲ್ಲಿ ತಾವುಗಳೆಲ್ಲರೂ ಸೇರಿ ಸಮಸ್ಯೆಗಳೇನಿದೆ, ಅದರ ಬಗ್ಗೆ ಚರ್ಚಿಸಿ, ಅವರು ರಾತ್ರಿಯೊಳಗಾಗಿ ಅದರ ಬಗ್ಗೆ ನಿರ್ಣಯ ತೆಗೆದುಕೊಳ್ಳುತ್ತಾರೆ.

ಶ್ರೀ ಬಿ.ಎಸ್. ಯಡಿಯೂರಪ್ಪ:- ಈ ರಾಜ್ಯದ ರೈತರಿಗೆ ಪ್ರಶಸ್ತಿ ಬೇಕು.

ಶ್ರೀ ಎಂ ಮಲ್ಲಿಕಾರ್ಜುನ ಖರ್ಗೆ:- ಅಧ್ಯಕ್ಷರೆ, ಮಾನ್ಯ ಸಚಿವರು ಇದನ್ನು ಪ್ರತಿಯೊಂದು ಹೋಬಳಿಯಲ್ಲೂ ಮಾಡಿಸುವುದಾಗಿ ಹೇಳುತ್ತಿದ್ದಾರೆ, ಹೋಬಳಿಯಿಂದ ಹಳ್ಳಿಗಳಿಗೆ ಹೋಗುವುದಕ್ಕೆ.....

ಶ್ರೀ ಬಿ.ಎಸ್. ಯಡಿಯೂರಪ್ಪ:- ನಾಳೆ ರೈತರಿಗೆ ಕಾಂಪ್ಲೆಕ್ಸ್ ಗೊಬ್ಬರ ಸಿಗಬೇಕು. ಬೇಕದರೆ ನೀವು ಕಾರ್ಖಾನೆ ಮಾಲೀಕರನ್ನು ನೇಣು ಹಾಕಿ ನಮಗೆ ಗೊತ್ತಿಲ್ಲ, ಇದರಲ್ಲಿ ನಿಮ್ಮ ಸರ್ಕಾರದ ಹತೋಟಿ ಇರಬೇಕು. ನಿಯಂತ್ರಣವನ್ನು ತೆಗೆದ ನಂತರ ಯಾವ ದಿಕ್ಕಿನತ್ತ ತೆಗೆದುಕೊಂಡು ಹೋಗಬೇಕೆನ್ನುವುದು ನಿಮಗೆ ಗೊತ್ತಿರಬೇಕು. ಅದನ್ನು ಮಾಡಲಿಲ್ಲವೆಂದರೆ ಕಳೆದ ವರ್ಷ ಕೇಂದ್ರ ಸರ್ಕಾರದಿಂದ ಬಂದಿದ್ದಂಥ 60-70 ಕೋಟಿ ರೂಪಾಯಿಗಳನ್ನು ರೈತರಿಗೆ ಸಬ್ಸಿಡಿ ಕೊಡುವ ಮೂಲಕ ಉಪಯೋಗಿಸಿಕೊಳ್ಳಲಿಲ್ಲ. ಸಬ್ಸಡಿ ಬಗ್ಗೆ ಈಗಾಗಲೇ ಸಾಕಷ್ಟು ಚರ್ಚೆಯಾಗಿದೆ. ಈ ಕುರಿತು ಸನ್ಮಾನ್ಯ ಸಚಿವರಿಗೂ ನಾನು ಪತ್ರ ಬರೆದಿದ್ದೇನೆ. ಅನಂತರ ಸ್ವಲ್ಪ ದಿವಸ ಕಳೆದ ಬಳಿಕ ಯಾವುದೇ ಗೊಬ್ಬರವನ್ನು ಉಪಯೋಗಿಸಿಕೊಳ್ಳುವ ಕಾಲ ಮೀರಿತ್ತು. ಕಳೆದ ಒಂದು ವಾರದಿಂದ ಗೊಬ್ಬರ ಬೇಕಿದ್ದಾಗ ಸಬ್ಸಿಡಿಯಿಂದ ಉಪಯೋಗವಾಗಲಿಲ್ಲ. ನಾವು ಕ್ಷೇತ್ರಕ್ಕೆ ಹೋದಾಗ ರೈತರು ನಮಗೆ ದಬಾಯಿಸುತ್ತಾರೆ. ಇದಕ್ಕೆ ಪರಿಹಾರ ಹೇಳಿ ಎಂದರೆ, ಪರಿಹಾರ ಹುಡುಕದೆ ಬರೀ ಏನೇನೋ ಮಾತುಗಳನ್ನಾಡಿದರೆ? ಇದನ್ನು ನಾನು ಪ್ರತಿಭಟಿಸಿ.....

ಅಧ್ಯಕ್ಷರು:- ಬೇಡ, ನೀವು ಪ್ರತಿಭಟನೆ ಮಾಡಿ ಹೊರಟು ಹೋದರೆ ಕೇಳುವವರಾರು? ದಯಮಾಡಿ ಕುಳಿತುಕೊಳ್ಳಿ.

ಶ್ರೀ ಬಿ.ಎಸ್.ಯಡಿಯೂರಪ್ಪ:- ಸರ್ಕಾರ ನಡೆಸಿದ್ದ ಗೊಬ್ಬರದ ಎಲ್ಲಾ ಕಾರ್ಖಾನೆಗಳೆಲ್ಲವೂ ಮುಗಿದುಹೋದವು, ಎನ್.ಜಿ.ಇ.ಎಫ್. ಸಹ ಮುಗಿದುಹೋಯಿತು. ಇನ್ನು ಗೊಬ್ಬರದ ಕಾರ್ಖಾನೆ ಪ್ರಾರಂಭಿಸಿ ಮಿಕ್ಚರ್ ತೆಗೆದುಕೊಂಡು ಹೋಬಳಿ ಕಡೆ ಹೋಗುತ್ತಾರೆ.... ಅಲ್ಲದೆ ಗುಂಡಿಗಳನ್ನು ಮುಚ್ಚದಿರುವುದರಿಂದ ಅವುಗಳಿಗೆ ಮಣ್ಣು ಹಾಕಿ ಮುಚ್ಚುವುದಕ್ಕೆ ಸರ್ಕಾರಕ್ಕೆ ಸಾಧ್ಯವಾಗುತ್ತಿಲ್ಲ.

(ಈ ಹಂತದಲ್ಲಿ ವಿರೋಧ ಪಕ್ಷದ ಕೆಲವು ಸದಸ್ಯರುಗಳು ಒಮ್ಮೆಲೆ ಎದ್ದು ನಿಂತು ಮಾತನಾಡತೊಡಗಿದರು)

ಶ್ರೀ ಸಿ.ಭೈರೇಗೌಡ:- ನಾನು ಹೇಳುವುದನ್ನು ಕೇಳುವಂಥ ಸೌಜನ್ಯ ಅವರಿಗೆ ಇಲ್ಲದಿದ್ದರೆ ಏನು ಹೇಳಬೇಕು? ನೀವು ಹೇಳುವುದೆಲ್ಲವನ್ನೂ ಕೇಳುವುದಕ್ಕೆ ನಾವಿಲ್ಲಿ ಬಂದಿಲ್ಲ. ಇದನ್ನು ಮೊದಲು ಅರ್ಥಮಾಡಿಕೊಳ್ಳಿರಿ.

ಶ್ರೀ ಕೆ.ಎಸ್.ಪುಟ್ಟಣ್ಣಯ್ಯ (ಪಾಂಡವಪುರ):- ಸನ್ಮಾನ್ಯ ಅಧ್ಯಕ್ಷರೆ, ಒಂದು ಗಂಟೆ ತಡವಾದರೂ ಕಷ್ಟ. ಮಳೆಯಾಗಿರುವುದು ನಿಜ. ಆದರೆ, ಈಗ ಗಂಭೀರವಾದ ಸಮಸ್ಯೆ ಏಕೆ ಉದ್ಭವಿಸಿದೆಯೆಂದರೆ, ಬೆಲೆ ಕಡಿಮೆಯಾದಾಗ ಎಲ್ಲಾ ಖಾಸಗೀ ವ್ಯಾಪಾರಸ್ಥರು ಅಂಗಡಿಗೆ ಬಾಗಿಲು ಹಾಕಿ ಹೆಚ್ಚಿನ ದರದಲ್ಲಿ ಮಾರುವುದರಿಂದ, ಸರ್ಕಾರಕ್ಕೂ ಹಾಗೂ ಸಾರ್ವಜನಿಕವಾಗಿಯೂ ಸಮಸ್ಯೆಯುಂಟಾಗುತ್ತದೆ. ಈ ಸಮಸ್ಯೆಯನ್ನು ಬಗೆಹರಿಸಬೇಕಾದರೆ ತತ್‌ಕ್ಷಣವೇ ಸಹಾಯಕ ನಿರ್ದೇಶಕರು, ಗ್ರಾಮ ಸೇವಕರು ಮುಖಾಂತರ ಮತ್ತು ವೇರ್‌ಹೌಸ್ ಕಾರ್ಪೊರೇಷನ್‌ನಲ್ಲ ಇವೊತ್ತು ಒಟ್ಟು ಎಷ್ಟು ಪ್ರಮಾಣದಲ್ಲಿ ಗೊಬ್ಬರದ ಸ್ಟಾಕ್ ಇದೆ? ಇದನ್ನು ತಕ್ಷಣವೇ ಸಹಕಾರ ಸಂಘಗಳಿಗೆ ಬಿಡುಗಡೆ ಮಾಡಿ, ರೈತರುಗಳಿಗೆ ತೊಂದರೆಯಾಗದಂತೆ ಕಾರ್ಯಕ್ರಮ ಹಮ್ಮಿಕೊಳ್ಳಬೇಕು. ಯಾವಾಗ ಗೊಬ್ಬರದ ಬೆಲೆ ಕಡಿಮೆಯಾಯಿತೋ, ಗೊಬ್ಬರ ಮಾರಾಟ ಮಾಡುವ ವರ್ತಕರೆಲ್ಲರೂ ಅಂಗಡಿಗಳಿಗೆ ಬಾಗಿಲು ಹಾಕಿಕೊಂಡು ಹಿಂದಿನ ಬಾಗಿಲ ಮೂಲಕ ಗೊಬ್ಬರವನ್ನು ದುಬಾರಿ ಬೆಲೆಗೆ ಮಾರಾಟ ಮಾಡುವಂಥ ವಾತಾವರಣ ಸೃಷ್ಟಿಯಾಗಿರುವುದರಿಂದ, ಎಲ್ಲಾ ಕಡೆಯೂ ಗಲಾಟೆಯಾಗಿದೆ. ಆದುದರಿಂದ, ರೈತರುಗಳಿಗೆ ಸಹಕಾರ ಸಂಘಗಳ ಮೂಲಕ ಗೊಬ್ಬರವನ್ನು ವಿತರಿಸಿ ತಾತ್ಕಾಲಿಕವಾಗಿ ಉದ್ಭವಿಸಿರುವ ಸಮಸ್ಯೆಯನ್ನು ಬಗೆಹರಿಸಬೇಕು. ಎರಡನೆಯದಾಗಿ, ತಾವು ಹೇಳತಕ್ಕಂಥ ಪೊಟಾಷ್, ಸೂಪರ್ ನೈಟ್ರೋಜೆನ್ ಅನ್ನು ಬೆರೆಸಿ ಮಾರಾಟ ಮಾಡುವಂತಾದ್ದು ಹಳೆಯ ಪದ್ಧತಿಯಾಗಿರುವುದರಿಂದ ತಾವು ಅದನ್ನು ಇಂಟ್ರಡ್ಯೂಸ್ ಮಾಡಿ. ಅದು ಎರಡನೆಯ ಪ್ರಶ್ನೆ. ಆದರೆ, ತಾತ್ಕಾಲಿಕವಾಗಿ ಇದರ ಬಗ್ಗೆ ಸರ್ಕಾರದ ಕಾರ್ಯಕ್ರಮವೇನು? ತಾವು ಹೇಳುತ್ತಿರುವ ವಿಷಯದ ಬಗ್ಗೆ ಬೇಕಾದರೆ ಹ್ಯಾಂಡ್ ಬಿಲ್ ಹಾಕಿ ಆ ಮೂಲಕ ರೈತರನ್ನು

ಶಿಕ್ಷಿತರನ್ನಾಗಿಸಿ ಗೊಬ್ಬರವನ್ನು ಮಿಕ್ಸ್ ಮಾಡಿ ಮಾರಾಟ ಮಾಡುವುದರಲ್ಲಿ ಅಭ್ಯಂತರವೇನೂ ಇಲ್ಲ. ಇದರಿಂದ 95 ರೂಪಾಯಿಗಳು ಉಳಿತಾಯವಾಗುತ್ತದೆನ್ನುವ ಮಾತನ್ನು ನಾನು ಸ್ವಾಗತಿಸುತ್ತಾ ತತ್‌ಕ್ಷಣದಲ್ಲಿ ಈ ಕಾರ್ಯಕ್ರಮ ಜಾರಿಗೆ ಬರಬೇಕು ಎಂದು ಹೇಳಿ ಒತ್ತಾಯಿಸುತ್ತೇನೆ.

ಶ್ರೀ ಡಿ.ಆರ್.ಪಾಟೀಲ್ (ಗದಗ):- ಮಾನ್ಯ ಅಧ್ಯಕ್ಷರೆ, ಈಗ ಏನು ಸಮಸ್ಯೆ ಉದ್ಭವಿಸಿದೆ ಎಂದರೆ, ಡಿ.ಎ.ಪಿ.ಗೆ ಇವೊತ್ತು ಕೇಂದ್ರ ಸರ್ಕಾರ ಕೊಡುತ್ತಿದ್ದ ಸಬ್ಸಿಡಿಯನ್ನು ಇಳಿಸಿದ್ದರೂ ಸಹ ಹಿಂದೆ ಯಾವ ದರಕ್ಕೆ ಮಾರಾಟ ಮಾಡಲಾಗುತ್ತಿತ್ತೋ ಅದಕ್ಕಿಂತ ಹೆಚ್ಚಿನ ದರದಲ್ಲಿ ಈಗ ರಸಗೊಬ್ಬರವನ್ನು ಮಾರಾಟ ಮಾಡುತ್ತಿದ್ದಾರೆ. ಮಳೆ ಬಿದ್ದಿರುವುದರಿಂದ ಎಲ್ಲಾ ರೈತರಿಗೂ ಈಗ ಗೊಬ್ಬರ ಬೇಕಾಗಿದೆ. ರೈತರು ಗೊಬ್ಬರ ಖರೀದಿಗೆಂದು ಅಂಗಡಿಗೆ ಹೋದಾಗ ಈ ಪ್ರಶ್ನೆ ಉದ್ಭವಿಸಿದೆ. ಆದುದರಿಂದ, ಕಂದಾಯ ಅಧಿಕಾರಿಗಳ ಸಮಕ್ಷಮದಲ್ಲಾಗಲಿ ಇಲ್ಲವೇ ಪೋಲೀಸ್ ಅಧಿಕಾರಿಗಳ ಸಮಕ್ಷಮದಲ್ಲಾಗಲಿ ರೈತರುಗಳಿಗೆ ಗೊಬ್ಬರವನ್ನು ವಿತರಿಸಬೇಕು. ಆದರೆ, ಕೃಷಿ ಇಲಾಖೆಯ ಅಧಿಕಾರಿಗಳನ್ನು ಮಾತ್ರ ಗೊಬ್ಬರ ವಿತರಣೆಗೆ ನೇಮಿಸಬಾರದು. ಕೃಷಿ ಇಲಾಖಾಧಿಕಾರಿಗಳ ಕಣ್ಣೆದುರಿಗೇ ಇಂತಹ ಕೆಲಸ ನಡೆಯುತ್ತಿರುವುದರಿಂದ, ಅವರಿಂದ ಇದನ್ನು ನಿಲ್ಲಿಸುವುದಕ್ಕಾಗುವುದಿಲ್ಲ. ಆದ್ದರಿಂದ, ಈ ಸಮಸ್ಯೆಗೆ ಪರಿಹಾರ ಸಿಗಬೇಕು.

ಶ್ರೀ ಸಿ.ಭೈರೇಗೌಡ:- ಡಿ.ಎ.ಪಿ. ತಯಾರಕರೇ ಒಪ್ಪಿ, ಅವರು ನಮ್ಮ ಸಬ್ಸಿಡಿ ಯೋಜನೆಯಲ್ಲಿ ಬಂದಿರುವುದರಿಂದ, ಗೊಬ್ಬರವನ್ನು ಎಲ್ಲಿಯಾದರೂ ಹೆಚ್ಚಿನ ಬೆಲೆಗೆ ಮಾರಾಟ ಮಾಡುತ್ತಿದ್ದು ಕಂಡುಬಂದರೆ, ದಯವಿಟ್ಟು ಆ ಅಂಗಡಿ ಮಾಲೀಕರ ಹೆಸರು ತಿಳಿಸಿದರೆ, ಅವರಿಂದ ಲೈಸೆನ್ಸ್ ಪಡೆದು ಸೂಕ್ತ ಕ್ರಮ ಕೈಗೊಳ್ಳುತ್ತೇವೆ.....

(ಈ ಹಂತದಲ್ಲಿ ಸಚಿವರ ಹೇಳಿಕೆಗೆ ವಿರೋಧ ಪಕ್ಷದ ಸದಸ್ಯರೆಲ್ಲರೂ ಒಮ್ಮೇಲೇ ಎದ್ದು ನಿಂತು ಆಕ್ಷೇಪ ವ್ಯಕ್ತಪಡಿಸಿದರು)

ಅಧ್ಯಕ್ಷರು:- ಮಾನ್ಯ ಭೈರೇಗೌಡರೆ, ನಾನು ಏನು ಹೇಳುತ್ತಿದ್ದೇನೆಂದರೆ, ನಿಮ್ಮ ಪರಿಚಯ ಸಾರ್ವಜನಿಕ ಬದುಕಿಗೂ ಮತ್ತು ಈ ಸದನಕ್ಕೂ ಬೇರೆ ರೀತಿಯದಾಗಿದೆ. ನೀವು ಮಾತನಾಡುತ್ತಾ 'ಆ ಕುರಿತ ನಿದರ್ಶನಗಳಿದ್ದರೆ ಸಂಬಂಧಿಸಿದ ವರ್ತಕರ ಹೆಸರು ಕೊಡಿ ಕ್ರಮ ತೆಗೆದುಕೊಳ್ಳುತ್ತೇವೆ' ಎಂದು ಹೇಳಿದರೆ ನಾವು ಈ ಸದನದಲ್ಲಿ ಭೈರೇಗೌಡರಿಂದ ಆ ರೀತಿಯ ಮಾತುಗಳನ್ನು ಯಾರೂ ಅಪೇಕ್ಷಿಸುವುದಿಲ್ಲ. ಈ ದಿಶೆಯಲ್ಲಿ ತಾವು ತಕ್ಷಣ ತೆಗೆದುಕೊಳ್ಳಬೇಕಾಗಿರುವ ಕ್ರಮವೇ ಬೇರೆಯಾಗಿದೆ. ಇದರ ಹಿಂದೆ ದೊಡ್ಡ ಸಂಚು ನಡೆದಿದ್ದು, ಮಾನ್ಯ ಸದಸ್ಯರಾದ ಡಿ.ಆರ್.ಪಾಟೀಲರು ಹೇಳಿರುವುದಕ್ಕೆ ನಾನು ಪೂರ್ತಿ ಅನುಮೋದಿಸುತ್ತೇನೆ. ತಾವು ತತ್‌ಕ್ಷಣ ಕಾರ್ಯನಿರತರಾಗಿ ಯಾವ್ಯಾವ ಇಲಾಖೆಯವರು ಇದರಲ್ಲಿ ಪಾಲ್ಗೊಂಡಿದ್ದಾರೆ ಎನ್ನುವುದರ ಬಗ್ಗೆ ಸ್ವಲ್ಪ ಪೋಲೀಸರ ಸಹಕಾರ ಪಡೆದು ಇಂತಹ ಅನ್ಯಾಯ ಪ್ರಕರಣಗಳಾಗುತ್ತಿರುವ ನಾಲ್ಕೈದು ಕಡೆ ಸಂಬಂಧಿಸಿದವರಿಗೆ 'ಬಿಸಿ' ಮುಟ್ಟಿಸಿದರೆ ತನ್ನಷ್ಟಕ್ಕೆ ತಾನಾಗಿ ನಿಯಂತ್ರಣಕ್ಕೆ

ಬರುತ್ತದೆ. ಇದರ ಬದಲು 'ನೀವು ಅಂಗಡಿ ವರ್ತಕರ ಹೆಸರು ಕೊಡಿ, ಕ್ರಮ ಕೈಗೊಳ್ಳುತ್ತೇವೆ' ಎನ್ನುವುದು ಸರಿಯಲ್ಲ.

ಶ್ರೀ ಸಿ.ಭೈರೇಗೌಡ:- ತಾವು ಏನು ಹೇಳಿದ್ದೀರಿ, ಈ ಕೆಲಸವನ್ನು ನಾನು ಈಗಾಗಲೇ ಮಾಡಿದ್ದೇನೆ, ಜಿಲ್ಲಾಧಿಕಾರಿಗಳಿಗೂ ಈ ಕುರಿತು ತಿಳಿಸಿದ್ದು, ಪೋಲೀಸಿನವರನ್ನು ಕೆಲವು ಕಡೆ ಕಳುಹಿಸಿ ಬಾಗಿಲು ಹಾಕಿರುವ ಗೊಬ್ಬರದ ಅಂಗಡಿಗಳನ್ನು ತೆರೆಸಿ ರೈತರುಗಳಿಗೆ ಗೊಬ್ಬರವನ್ನು ವಿತರಿಸುವಂಥ ಕೆಲಸವನ್ನು ಕೆಲವು ಕಡೆಗಳಲ್ಲಿ ಈಗಾಗಲೇ ಮಾಡಿದ್ದೇವೆ. ರೈತರುಗಳ ಕಷ್ಟ ಏನಿದೆಯೆಂಬುದು ನನಗೂ ಗೊತ್ತಿದೆ. ಆದರೆ, ಕೆಲವು ಕಡೆಗಳಲ್ಲಿ ದುರುಪಯೋಗ ನಡೆಯುತ್ತಿರುವುದರಿಂದ, ಅಂತಹುದರ ಬಗ್ಗೆ ನನಗೆ ಮಾಹಿತಿ ಬೇಕಾಗಿದೆಯೆಂದು ಕೇಳಿದೆ.

ಶ್ರೀ ಶ್ರೀಶೈಲಪ್ಪ ವಿರೂಪಾಕ್ಷಪ್ಪ ಬಿದರೂರು (ರೋಣ):- ಮಾನ್ಯ ಅಧ್ಯಕ್ಷರೆ, ಮಿಕ್ಸ್‌ರ್ಸ್ ಬಗ್ಗೆ ಒಂದು ವಿಷಯ ಪ್ರಸ್ತಾಪವಾಯಿತು. ಡಿ.ಎ.ಪಿ.ಯನ್ನು ಏನು ಮಿಕ್ಸ್ ಮಾಡುತ್ತೇವೆ, ಅದು ಕಡಿಮೆ ಬೆಲೆಯಲ್ಲಿ ರೈತರಿಗೆ ಸಿಗುತ್ತಿದೆಯೆಂದು ಸನ್ಮಾನ್ಯ ಸಚಿವರು ಹೇಳಿದರು. ಮೊದಲಿನಿಂದಲೂ ಡಿ.ಎ.ಪಿ. ಮೇಲೆ ಸಬ್ಸಿಡಿ ಇರುವುದರಿಂದ ರೈತರು ತಾವೇ ಮಿಕ್ಸ್ ಮಾಡಿಕೊಂಡು ಅದನ್ನು ತಮ್ಮ ಹೊಲ-ಗದ್ದೆಗಳಿಗೆ ಹಾಕುವಂಥ ಪದ್ಧತಿ ಇತ್ತು. ಇವೊತ್ತು ಅದು ಹ್ಯಾಂಡ್ ಮಿಕ್ಸಿಂಗ್ ಆಗಿದ್ದು, ಬಹಳ ಉತ್ತಮವಾಗಿ ಹ್ಯಾಂಡ್ ಮಿಕ್ಸಿಂಗ್ ಮಾಡಿ ರೈತರು ತಮ್ಮ ಹೊಲ-ಗದ್ದೆಗಳಿಗೆ ಉಪಯೋಗಿಸುವುದಕ್ಕೆ ಸಾಧ್ಯವಿದೆ. ಈಗ ಡಿ.ಎ.ಪಿ. ಮತ್ತು ಮೂಲ ಗೊಬ್ಬರವನ್ನು ಬೆರೆಸುವುದರಿಂದ, ಮಿಕ್ಚ್ಚರ್ ಪದ್ಧತಿಯನ್ನು ಕೈಬಿಟ್ಟರೆ ಇದೊಂದು ದೊಡ್ಡ ಸಮಸ್ಯೆಯಾಗುವುದಿಲ್ಲ. ಮಿಕ್ಚ್ಚರ್ ಬಗ್ಗೆ ಇವರು ಏಕೆ ಒತ್ತಾಯ ಮಾಡುತ್ತಿದ್ದಾರೆಂದು ತಿಳಿಯಲಾರದ ಸಂಗತಿಯಾಗಿದೆ.

ಶ್ರೀ ಅಂಬಡಗಟ್ಟಿ ಶ್ರೀಕಾಂತ್ ರುದ್ರಪ್ಪ (ಧಾರವಾಡ ಗ್ರಾಮೀಣ):- ಮಾನ್ಯ ಅಧ್ಯಕ್ಷರೆ, ಮಾನ್ಯ ಸದಸ್ಯರಾದ ಡಿ.ಆರ್.ಪಾಟೀಲ್‌ರವರ ಮಾತನ್ನು ಮುಂದುವರೆಸುತ್ತಾ ಹೇಳುವುದಾದರೆ ಡಿ.ಎ.ಪಿ. ಮಾರಾಟ ಮಾಡುವ ವ್ಯಾಪಾರಸ್ಥರು ಸಬ್ಸಿಡಿ ದರದಲ್ಲಿ ಪೂರೈಕೆ ಮಾಡುವುದಾಗಿ ಒಪ್ಪಿಕೊಂಡಿದ್ದರೂ ಕೂಡ ನನ್ನ ತಾಲ್ಲೂಕಾದ ಧಾರವಾಡ ನಗರದ ಬಹಳಷ್ಟು ಗೊಬ್ಬರ ಮಾರಾಟ ಮಾಡುವ ಅಂಗಡಿಗಳಲ್ಲಿ ಯಾವ ರೈತರು ಹೆಚ್ಚಿನ ದರ ಕೊಡುತ್ತಾರೆ ಅವರಿಗೆ ಗೊಬ್ಬರ ಸಿಗುತ್ತಿದ್ದು, ಉಳಿದ ಬಡ ರೈತರಿಗೆ ಗೊಬ್ಬರ ಸಿಗುತ್ತಿಲ್ಲ. ಈ ಕುರಿತು ಸೂಕ್ತ ಕ್ರಮ ಕೈಗೊಳ್ಳಬೇಕೆಂದು ನಾನು ಕೃಷಿ ಇಲಾಖಾಧಿಕಾರಿಗಳಿಗೆ ಹೇಳಿದಾಗ ಆ ಕುರಿತು ತಮಗೆ ಯಾವುದೇ ಆದೇಶ ಬಂದಿಲ್ಲವೆನ್ನುವ ಉತ್ತರ ಅವರಿಂದ ಸಿಕ್ಕಿತು. ಜೊತೆಗೆ ನಾನು ಅವರಲ್ಲಿ ವಿನಂತಿಸಿಕೊಂಡಿದ್ದೆ. ಏನೆಂದರೆ, ಯಾವ್ಯಾವ ಅಂಗಡಿಗಳಲ್ಲಿ ಎಷ್ಟೆಷ್ಟು ಗೊಬ್ಬರದ ಸ್ಟಾಕ್ ಇದೆ? ಮತ್ತು ಯಾವಯಾವ ವರ್ತಕರು ಈ ರೀತಿ ಹೆಚ್ಚಿನ ದರದಲ್ಲಿ ಮಾರಾಟ ಮಾಡುತ್ತಿದ್ದಾರೆ ಎಂಬುದನ್ನು ತಿಳಿಯಲು ಭೇಟಿ ಕೊಡಿ, ಗೊಬ್ಬರ ಸ್ಟಾಕ್ ಇಲ್ಲವೆನ್ನುವ ಅಂಗಡಿಗಳ ಮೇಲೆ ಧಾಳಿ ನಡೆಸಿ ಅವರನ್ನು ಹೊರಗಿಡುವಂಥ ವ್ಯವಸ್ಥೆ ಮಾಡಬೇಕು ಎಂದು ಹೇಳಿದ್ದರೂ ಕೂಡ ಇದುವರೆವಿಗೂ ಏನೂ ಕ್ರಮ ಜರುಗಿಸಲಿಲ್ಲ. ಅಲ್ಲದೆ,

ಮಿಕ್ಸ್‌ರ್ ಮಾಡಿ ಮಾರಾಟ ಮಾಡಬೇಕೆಂದು ಒಂದು ಅಭಿಪ್ರಾಯ ಕೊಟ್ಟಿದ್ದರೂ, ಈಗ ಸಾಮಾನ್ಯವಾಗಿ ಇಪ್ಪತ್ತು ಎಕರೆಗಳಷ್ಟು ಹೊಲ, ಗದ್ದೆ ಇದ್ದರೆ ಅಲ್ಲಿ ಕಬ್ಬು, ಭತ್ತ, ಶೇಂಗಾ, ಹತ್ತಿ, ಜೋಳ ಮುಂತಾದ ಎಲ್ಲಾ ಬೆಳೆಗಳನ್ನು ಬೆಳೆಯುವಾಗ ಅದಕ್ಕೆ ಬೇರೆ ಬೇರೆ ಹಂತಗಳಲ್ಲಿ ಗೊಬ್ಬರ ಕೊಡುವಂಥ ಪ್ರಸಂಗಗಳಿರುವಾಗ ಪ್ರತಿ ಸಾರಿಯೂ ಮಿಕ್ಸ್ ಮಾಡಿಕೊಳ್ಳುವುದಕ್ಕೆ ಬಹಳ ತೊಂದರೆಯಾಗುವುದರಿಂದ, ಆ ದಿಸೆಯಲ್ಲಿ ನನ್ನ ಸಲಹೆ ಏನೆಂದರೆ, ಗೊಬ್ಬರಕ್ಕೆ ಸಬ್ಸಿಡಿ ಕೊಡುವಾಗ ನೇರವಾಗಿ ರೈತರಿಗೆ ಕೊಡಲು ಸಾಧ್ಯವೇ? ಎಂಬುದನ್ನು ಪರಿಶೀಲಿಸಬೇಕು ಈ ರೀತಿ ಸಬ್ಸಿಡಿ ಕೊಡುವುದಕ್ಕೆ ಕಾನೂನಿನಲ್ಲ ಅವಕಾಶವಿದ್ದರೆ ವ್ಯಾಪಾರಸ್ಥರ ಮೂಲಕ ಸಬ್ಸಿಡಿ ದರದಲ್ಲಿ ಗೊಬ್ಬರವನ್ನು ಖರೀದಿಸುವ ರೈತರಿಗೆ ತಾವು ನೇರವಾಗಿ ಇಲಾಖೆ ಮುಖಾಂತರ ಸಬ್ಸಿಡಿ ಸೌಲಭ್ಯ ಒದಗಿಸುವ ಅನುಕೂಲವಾದರೆ ಅವರಿಗೆ ಬಹಳ ಸಹಾಯವಾದೀತೆಂಬುದು ಒಂದು ಅಭಿಪ್ರಾಯವಾಗಿರುವುದರಿಂದ, ಈ ಕುರಿತಂತೆ ತಾವು ದಯವಿಟ್ಟು ಈ ದಿಸೆಯಲ್ಲಿ ಕ್ರಮ ಕೈಗೊಳ್ಳುವುದಕ್ಕೆ ಇಲಾಖಾಧಿಕಾರಿಗಳಿಗೆ ಸೂಚನೆ ಕೊಡಬೇಕು. ಇಲಾಖಾಧಿಕಾರಿಗಳು ವರ್ತಕರ ಜೊತೆ ಶಾಮೀಲಾಗಿರುವುದರಿಂದ ಈ ಕುರಿತು ಸರ್ಕಾರದಿಂದ ಯಾವುದೇ ಆದೇಶ ಬಂದಿಲ್ಲವೆಂದು ಕೆಲವು ಅಧಿಕಾರಿಗಳು ಹೇಳುತ್ತಿದ್ದಾರೆ.

1.40 ಪಿ.ಎಂ.

ಶ್ರೀ ಹೆಚ್.ಎನ್.ನಂಜೇಗೌಡ:- ಮಾನ್ಯ ಅಧ್ಯಕ್ಷರೆ, ಗೊಬ್ಬರಕ್ಕೆ ಸಬ್ಸಿಡಿಯನ್ನು ಕೊಡಬೇಕಾದರೆ ಆಯಾಯ ರಾಜ್ಯ ಸರ್ಕಾರಗಳು ಬೆಲೆಯನ್ನು ತೀರ್ಮಾನ ಮಾಡಬೇಕು. ನಮ್ಮ ರಾಜ್ಯದಲ್ಲಿ ಹೋದ ವರ್ಷ ಮತ್ತು ಅದರ ಹಿಂದಿನ ವರ್ಷ ನಿಮ್ಮ ಸರ್ಕಾರ ಬಂದಮೇಲೆ ಕಾಲಕ್ಕೆ ಸರಿಯಾಗಿ ಬೆಲೆಯನ್ನು ತೀರ್ಮಾನ ಮಾಡಲಿಲ್ಲ. ಈ ರಾಜ್ಯದ ರೈತರಿಗೆ ಸಬ್ಸಿಡಿ ಸೌಲಭ್ಯ ಸರ್ಕಾರದ ★★ ವಂಚಿತವಾಯಿತು. ನೆರೆ ರಾಜ್ಯಗಳಿಂದ ಬ್ಲಾಕ್‌ನಲ್ಲಿ ಗೊಬ್ಬರವನ್ನು ಕೊಂಡುಕೊಳ್ಳತಕ್ಕ ಪರಿಸ್ಥಿತಿ ನಮಗೆ ಬಂತು. ಎಷ್ಟು ಸಬ್ಸಿಡಿ ಇದರಿಂದ ನಷ್ಟವಾಯಿತು ಎಂಬ ಬಗ್ಗೆ ತಾವು ಲೆಕ್ಕ ಮಾಡಿ ಹೇಳುತ್ತೀರಾ ನೀವು ಬೆಲೆಯನ್ನು ನಿಗದಿ ಮಾಡದೆಯೇ ನಿಮ್ಮ ಲೋಪದಿಂದ ಎಷ್ಟು ಸಬ್ಸಿಡಿ ನಷ್ಟವಾಯಿತು ಎಂಬ ಬಗ್ಗೆ ಹೇಳುತ್ತೀರಾ?

ಶ್ರೀ ಸಿ.ಭೈರೇಗೌಡ (ಕೃಷಿ ಸಚಿವರು):- ಮಾನ್ಯ ಅಧ್ಯಕ್ಷರೆ, ನಾವು ಗೊಬ್ಬರದ ಬೆಲೆಯನ್ನು ಹೆಚ್ಚು ಮಾಡುವುದಕ್ಕೆ ತಯಾರಾಗಿಲ್ಲ. ಗೊಬ್ಬರದ ಬೆಲೆಯನ್ನೇನು ನಾವೀಗ ನಿಗದಿ ಮಾಡಿದ್ದೇವೆ, ಆ ಬೆಲೆಯನ್ನು ಹೆಚ್ಚು ಮಾಡುವುದಕ್ಕೆ ನಾವು ತಯಾರಾಗಿಲ್ಲವೆಂದು ಸ್ಪಷ್ಟವಾಗಿ ಹೇಳುತ್ತೇನೆ. ನಾವು ನಿಗದಿ ಮಾಡಿರತಕ್ಕ ಬೆಲೆಯಲ್ಲಿಯೇ ಗೊಬ್ಬರವನ್ನು ಒದಗಿಸತಕ್ಕ ವ್ಯವಸ್ಥೆಯನ್ನು ಮಾಡುತ್ತೇವೆ.

(ಗೊಂದಲ)

ಶ್ರೀ ಬಿ.ಎಸ್.ಯಡಿಯೂರಪ್ಪ:- ಅವರು ಈ ರೀತಿಯಾಗಿ ★★ ಹೇಳಬಾರದು.

★★ Expunged as ordered by the chair.

SRI H.N. NANJEGOWDA:- I am really sorry, Sir. He should withdraw his remards. Are you paying the subsidy?

ಶ್ರೀ ಸಿ.ಬೈರೇಗೌಡ:- ಅಷ್ಟು ಗೊತ್ತಿಲ್ಲವೆ ನನಗೆ?

ಶ್ರೀ ಹೆಚ್.ಎನ್.ನಂಜೇಗೌಡ:- ಗೊತ್ತಿದ್ದರೆ ಈ ರೀತಿ ಮಾತನಾಡುತ್ತಿದ್ದಿರೋ? ತಮಗೆ ಗೊತ್ತಿರುವುದಾಗಿದ್ದರೆ ಸಬ್ಸಿಡಿ ಕೊಡುವವರ್ಯಾರು? ಸಬ್ಸಿಡಿಯನ್ನು ಕೇಂದ್ರ ಸರ್ಕಾರ ಕೊಡುತ್ತಿರತಕ್ಕದ್ದು, ಕರ್ನಾಟಕ ಸರ್ಕಾರವೇನು ಕೊಡುತ್ತಿರಲಿಲ್ಲ. ಅದನ್ನೇಕೆ ತಪ್ಪಿಸಿದಿರಿ? You are attributing motives to me. I am not like that. I am not Byregowda or Nagegowda or anybody else, I am Nanjegowda and I am a different person.

SRI C.BYREGOWDA:- I am Byregowda, let him know it.

SRI H.N.NANJEGOWDA:- I know.

SRI SHANKARLINGEGOWDA:- Sir,...

SRI SPEAKER:- Yes, you are Shankarlingegowda!

(INTERRUPTIONS)

ಶ್ರೀ ವಾಟಾಳ ನಾಗರಾಜ್:- ಇಲ್ಲಿ ಗೌಡರ ಮೇಳ ಜಾಸ್ತಿಯಾಗಿದೆ ಅದನ್ನು ನಿಲ್ಲಿಸಬೇಕು.

ಶ್ರೀ ಹೆಚ್.ಎನ್.ನಂಜೇಗೌಡ:- ನನ್ನ ಪ್ರಶ್ನೆ ಏನೆಂದರೆ, ಬೇರೆ ರಾಜ್ಯದಲ್ಲಿ ಯಾವ ದಿನಾಂಕದಿಂದ ಗೊಬ್ಬರದ ಬೆಲೆ ನಿಗದಿಯಾಗಿ ಸಬ್ಸಿಡಿ ಸಿಕ್ಕಿದೆ, ನಮ್ಮ ರಾಜ್ಯದಲ್ಲಿ ಯಾವ ದಿನಾಂಕದಿಂದ ಸಬ್ಸಿಡಿಯ ಸೌಲಭ್ಯ ರೈತರಿಗೆ ಒದಗಿತು? ಆ ರೀತಿ ಸೌಲಭ್ಯ ಒದಗದಿದ್ದರೆ ರೈತರಿಗೆ ಎಷ್ಟು ನಷ್ಟವಾಯಿತು? ಇಷ್ಟು ಅಂಕಿಅಂಶವನ್ನು ಅವರು ಒದಗಿಸಬೇಕಲ್ಲವೆ? ಅದಕ್ಕೆ ಯಾರು ಹೊಣೆಗಾರರು ಎಂದು ನಾನು ಹೇಳುವುದಿಲ್ಲ. ಅದಕ್ಕೆ ಕೇಂದ್ರ ಸರ್ಕಾರವೊ ಗೊಬ್ಬರ ತಯಾರಕರೋ ಅಥವಾ ಇವರೋ ಯಾರು ಹೊಣೆಗಾರರೆಂದು ಅವರೇ ಹೇಳಲಿ. ಹೋದ ಸಾಲಿನಲ್ಲಿ ಮತ್ತು ಅದರ ಹಿಂದಿನ ಸಾಲಿನಲ್ಲಿ ರೈತರಿಗೆ ಸಬ್ಸಿಡಿಯ ಸೌಲಭ್ಯ ಸಿಕ್ಕಲಿಲ್ಲ. ಇದಕ್ಕೆ ಯಾರು ಕಾರಣಕರ್ತರು? ಈ ಸೌಲಭ್ಯದಿಂದ ಎಷ್ಟು ವಂಚಿತವಾಯಿತು ಎಂಬ ಬಗ್ಗೆ ಅಂಕಿಅಂಶವನ್ನು ಹೇಳಲಿ.

ಶ್ರೀ ಸಿ.ಬೈರೇಗೌಡ:- ಮಾನ್ಯ ಅಧ್ಯಕ್ಷರೆ, ಕೇಂದ್ರ ಸರ್ಕಾರದ ಯೋಜನೆಯ ಪ್ರಕಾರ ಚಿಲ್ಲರೆ ಮಾರಾಟ ಮಾಡುವ ಗೊಬ್ಬರಕ್ಕೆ ಬೆಲೆಯನ್ನು ನಿಗದಿ ಮಾಡತಕ್ಕ ಅಧಿಕಾರ ರಾಜ್ಯಸರ್ಕಾರಕ್ಕಿದೆ. ನಾವು ಕಾಲಕಾಲಕ್ಕೆ ತಕ್ಕಂತೆ ಗರಿಷ್ಟ ಚಿಲ್ಲರೆ ಮಾರಾಟದ ಬೆಲೆಯನ್ನು

ಗೊಬ್ಬರಕ್ಕೆ ನಿಗದಿಮಾಡಿಕೊಂಡು ಬಂದಿದ್ದೇವೆ. ನಾವು ನಿಗದಿ ಮಾಡಿದಂಥ ಬೆಲೆಗೆ ಮಾರಾಟ ಮಾಡಲು ಎರಡು ಬಾರಿ ಗೊಬ್ಬರ ತಯಾರಕರು ಒಪ್ಪಲಿಲ್ಲ. ಏಕೆಂದರೆ ಅವರು ಆಕಾಶದಷ್ಟು ಎತ್ತರದ ಬೆಲೆಗೆ ಮಾರಾಟ ಮಾಡಲು ಅವಕಾಶ ಕೊಡಬೇಕೆಂದು ಕೇಳಿದ್ದರು, ಅವರು ಒಪ್ಪಿದಂಥ ಬೆಲೆಗೆ ನಾವು ಬೆಲೆಯನ್ನು ನಿಗದಿಮಾಡಬೇಕಾಗಿತ್ತಂತೆ; ಅದಕ್ಕೆ ನಾವು ಒಪ್ಪಲಿಲ್ಲ. ರೈತರ ಹಿತದೃಷ್ಟಿಯಿಂದ ಎಷ್ಟು ಬೆಲೆಯನ್ನು ಕೊಟ್ಟು ಗೊಬ್ಬರವನ್ನು ಕೊಂಡುಕೊಳ್ಳಲು ಸಾಧ್ಯವಿದೆಯೋ ಅದನ್ನು ಲೆಕ್ಕಮಾಡಿ ನಾವು ಗೊಬ್ಬರದ ಬೆಲೆಯನ್ನು ನಿಗದಿ ಮಾಡಿದ್ದೇವೆ. ಕೇಂದ್ರಸರ್ಕಾರದ ಯೋಜನೆಯ ಪ್ರಕಾರ ಈ ಯೋಜನೆಯನ್ನು ಯಾರು ಒಪ್ಪುತ್ತಾರೋ ಅವರು ನಾವು ನಿಗದಿಪಡಿಸಿರತಕ್ಕ ಬೆಲೆಗೆ ಗೊಬ್ಬರವನ್ನು ಮಾರಾಟ ಮಾಡಬಹುದು. ಅವರು ಒಪ್ಪದಿದ್ದರೆ ನಾವು ಹೇಳಿದ ಬೆಲೆಗೆ ಅವರು ಗೊಬ್ಬರವನ್ನು ಮಾರಾಟ ಮಾಡಬೇಕೆಂದು ಒತ್ತಾಯ ಮಾಡುವ ಅಧಿಕಾರ ನಮಗಿಲ್ಲ. ಆಗ ಕೆಲವು ಗೊಬ್ಬರ ತಯಾರಕರು ನಮ್ಮಬೆಲೆಯನ್ನು ಒಪ್ಪಲಿಲ್ಲ, ಅವರ ಗೊಬ್ಬರ ಬಳಕೆಯಾಗಲಿಲ್ಲ. ಅವರು ಹೇಳಿದ ಪ್ರಕಾರ ನಾವು ಗರಿಷ್ಠ ಚಿಲ್ಲರೆ ಮಾರಾಟದ ಬೆಲೆಯನ್ನು ನಿಗದಿ ಮಾಡಿದ್ದರೆ, ಗೊಬ್ಬರ ತಯಾರಕರಿಗೆ ಲಾಭವಾಗುತ್ತಿತ್ತು. ಆದ್ದರಿಂದಲೇ ನಾವು ಇವರು ಯಾರ ಪರವಾಗಿ ವಾದ ಮಾಡುತ್ತಾರೆಂದು ಹೇಳಿದ್ದುದು. ಆದ್ದರಿಂದ ನಾನು ಅದರ ಬಗ್ಗೆ ವಾಪಸ್ಸು ಪಡೆಯುವಂಥದ್ದು ಮಾತನಾಡಿಲ್ಲ.

SRI SPEAKER:- Let the tempers cool down.

SRI H.N.NANJEGOWDA:- Fertilizer should be available. I am not worried whether the Government supplies or companies. But, fertilizers should be supplied to the farmers. ಉದಹರಣೆಗೆ ಆಹಾರ ಬೇಕು, ಆಹಾರವಿಲ್ಲವೆಂದು ಬ್ಲಾಕ್ ಮಾರುಕಟ್ಟೆಯಲ್ಲಿ ತೆಗೆದುಕೊಳ್ಳಿ ಎಂದು ಹೇಳುತ್ತೀರಾ? ಗೊಬ್ಬರ ಬೇಕು, ನೀವು ಬೆಲೆಯನ್ನು ನಿಗದಿ ಮಾಡುತ್ತೀರೋ ಬಿಡುತ್ತೀರೋ ನನಗೆ ಗೊತ್ತಿಲ್ಲ, ಆದರೆ ನಾನು ಬಳಕೆದಾರ. I am a consumer and I want fertilezers. Why did you force me to buy in the blackmarket which are supplied by other states. I will charge him. He must be in understanding with the sellers from other States like Tamilnadu, Andra Pradesh etc., and he allowed the blackmarketing at the cost of farmers of Karnataka.

ಶ್ರೀ ಸಿ.ಭೈರೇಗೌಡ:- ನಿಯಮಾವಳಿಯಲ್ಲಿ ಏನು ಪದ್ಧತಿ ಇದೆ, ಅದರ ಪ್ರಕಾರ ನಾವು ಚಾಚೂತಪ್ಪದೆ ಸಕಾಲದಲ್ಲಿ ಏನು ಕ್ರಮ ತೆಗೆದುಕೊಳ್ಳಬೇಕಾಗಿತ್ತೊ ಅದನ್ನು ತೆಗೆದುಕೊಂಡಿದ್ದೇವೆ. ಅದಕ್ಕಿಂತ ಮಿಗಿಲಾಗಿ ನಾನು ಹೇಳಲು ತಯಾರಾಗಿಲ್ಲ.

SRI H.N.NANJEGOWDA:- What arrangements you

have made to procure and supply the fertilizers to the farmers of Karnataka. Why did you not supply who is reponsible for the loss of productions.

(INTERRUPTIONS)

ಶ್ರೀ ಸಿ.ಭೈರೇಗೌಡ:- ಮಾನ್ಯ ನಂಜೇಗೌಡರು ಈ ರೀತಿಯಾಗಿ ಮಾತನಾಡಿದರೆ ಅದಕ್ಕೆ ನನ್ನ ಉತ್ತರವಿಲ್ಲ. ಉತ್ತರವನ್ನು ಕೊಡುವುದೂ ಇಲ್ಲ. ಉತ್ತರ ಇಲ್ಲವೂ ಇಲ್ಲ.

(ಗೊಂದಲ)

ಶ್ರೀ ಹೆಚ್.ಎನ್.ನಂಜೇಗೌಡ:- ★★ ಹೇಗೆ? ತಾವು ಕೃಷಿ ಮಂತ್ರಿಗಳಾಗಿ ಏನು ವ್ಯವಸ್ಥೆ ಮಾಡಿದ್ದೀರಿ?

ಶ್ರೀ ಸಿ.ಭೈರೇಗೌಡ:- ಹೌದು ಎಲ್ಲಾ ವ್ಯವಸ್ಥೆ ಮಾಡಿದ್ದೇವೆ.

ಅಧ್ಯಕ್ಷರು:- ಸಂಸದೀಯ ವ್ಯವಹಾರದಲ್ಲಿ ಈ ರೀತಿಯಾದ ಸಂದರ್ಭಗಳು ಉದ್ಭವವಾಗತಕ್ಕದ್ದು ಸಾಮಾನ್ಯ. ಅವರ ಮಾತಿನ ಅರ್ಥವೇನೆಂದರೆ, ಹೋದ ವರ್ಷ ಸಬ್ಸಿಡಿಯ ಪ್ರಯೋಜನವನ್ನು ನಮ್ಮ ರಾಜ್ಯದ ರೈತರು ಪಡೆದುಕೊಳ್ಳಲು ಆಗಲಿಲ್ಲ, ಬ್ಲಾಕ್ ಮಾರ್ಕೆಟ್‌ನಲ್ಲಿ ಹೊರರಾಜ್ಯಕ್ಕೆ ಹೋಗಿ ಗೊಬ್ಬರವನ್ನು ತರಬೇಕಾಯಿತು ಎಂದು ಮಾನ್ಯ ನಂಜೇಗೌಡರು ಹೇಳಿದರು. ಆ ರೀತಿಯಾದ ಪರಿಸ್ಥಿತಿ ಏಕೆ ಉದ್ಭವವಾಯಿತು ಎಂದು ಹೇಳತಕ್ಕ ಆತುರದಲ್ಲಿ ತಾವು ''ಗೊಬ್ಬರದ ತಯಾರಕರು ಯಾರಿದ್ದಾರೆ ಅವರು ಬೆಲೆಯನ್ನು ನಿಗದಿ ಮಾಡಲು ಹೊರಟರು, ಗೊಬ್ಬರದ ಬೆಲೆ ಗಗನಕ್ಕೆ ಹೋಗುತ್ತಿತ್ತು, ಅವರ ಮಾತನ್ನು ನಾನು ಒಪ್ಪಿಕೊಂಡಿದ್ದರೆ ರೈತರಿಗೆ ಲಾಭವಾಗುತ್ತಿರಲಿಲ್ಲ, ನಾನು ಗೊಬ್ಬರ ತಯಾರಕರ ವಾದಕ್ಕೆ ಶರಣಾಗಲಿಲ್ಲ ಆದ್ದರಿಂದ ಆ ರೀತಿಯಾದ ಸಂದರ್ಭ ಒದಗಿಬಂತು'' ಎಂದು ತಾವು ಹೇಳಿದ್ದೀರಿ. ನಿಮ್ಮ ಮತ್ತು ಅವರ ಇಬ್ಬರು ಆಸಕ್ತಿ ರೈತರ ಕಲ್ಯಾಣ ಮಾಡತಕ್ಕದ್ದಾಗಿದೆ. ಗೊಬ್ಬರದ ತಯಾರಕರ ಮಾತಿಗೆ ನಾನು ಈಲ್ಡ್ ಆಗಿರಲಿಲ್ಲವೆಂದು ತಾವು ಪರೋಕ್ಷವಾಗಿ ಹೇಳುತ್ತ, ಆದ್ದರಿಂದ ಹೋದ ಸಾಲಿನಲ್ಲಿ ಹೆಚ್ಚು ಲಾಭ ಗೊಬ್ಬರಕ್ಕೆ ರೈತರಿಗೆ ಸಿಗಲಿಲ್ಲ ಗೊಬ್ಬರಕ್ಕೆ ಸ್ವಲ್ಪ ತೊಂದರೆಯಾಯಿತು ಎಂದು ಪರೋಕ್ಷವಾಗಿ ಒಪ್ಪಿಕೊಂಡಿರಿ. ಇಲ್ಲಿ ಸ್ವಲ್ಪ ಕಮ್ಯುನಿಕೇಷನ್ ಗ್ಯಾಪ್ ಆಯಿತು. ನೀವಿಬ್ಬರೂ ಈ ಸದನದ ಹಿರಿಯ ಸದಸ್ಯರುಗಳಾಗಿದ್ದೀರಿ. ನಮ್ಮ ಕಡತದಲ್ಲಿ ಆಕ್ಷೇಪಾರ್ಹವಾದ ವಿಷಯಗಳು ಹೋಗುವುದು ಬೇಡ. ನಿಮ್ಮಿಬ್ಬರ ಸದಭಿಪ್ರಾಯಗಳು ಸದನಕ್ಕೆ ಪರಿಚಯವಿರುವುದರಿಂದ ನಮ್ಮ ಕಾರ್ಯಕಲಾಪಗಳು ಗುಣಮಟ್ಟವನ್ನು ಕಾಪಾಡತಕ್ಕ ದೃಷ್ಟಿಯಿಂದ ಕೆಲವನ್ನು ನಾನು ಕಡತದಿಂದ ತೆಗೆಸಿಬಿಡುತ್ತೇನೆ. ಕಮ್ಯುನಿಕೇಷನ್ ಗ್ಯಾಪ್ ಏನು ತಮ್ಮಿಬ್ಬರ ಮಧ್ಯ ಉದ್ಭವವಾಯಿತು, ದಯಮಾಡಿ ತಮ್ಮಿಬ್ಬರಲ್ಲೂ ವಿನಂತಿ ಮಾಡಿಕೊಳ್ಳುತ್ತೇನೆ, ತಾವು ಅಧಿಕಾರದ ಜವಾಬ್ದಾರಿಯನ್ನು

★★ Expunged as ordered by the chair.

ಹೊಂದಿದ್ದೀರಿ, ಹೋದ ವರ್ಷದ ಕಹಿ ಹನ್ನೆಲೆಯೇನಿದ ಅದನ್ನು ಆಧಾರವಾಗಿಟ್ಟಕೊಂಡು ಎಲ್ಲಾ ಮಾನ್ಯ ಸದಸ್ಯರುಗಳನ್ನು ವಿಶ್ವಾಸಕ್ಕೆ ತೆಗೆದುಕೊಂಡು ಈ ಪರಿಸ್ಥಿತಿ ಈ ವರ್ಷ ಪುನಹ ಮುಂದುವರೆಯಲಾರದಂತೆ ಕ್ರಮ ತೆಗೆದುಕೊಳ್ಳಬೇಕೆಂದು ತಮಗೆ ಸೂಚಿಸಬಯಸುತ್ತೇನೆ.

ಶ್ರೀ ವಾಟಾಳ ನಾಗರಾಜ್:- ಮಾನ್ಯ ಅಧ್ಯಕ್ಷರೆ, ಮಾನ್ಯ ಕೃಷಿ ಸಚಿವರಾದ ಭೈರೇಗೌಡರು ಒಬ್ಬರು ದಕ್ಷ ಮಂತ್ರಿಗಳೆನ್ನುವುದರಲ್ಲಿ ಎರಡು ಅಭಿಪ್ರಾಯವಿಲ್ಲ. ನಾನು ಬಹಳ ವರ್ಷಗಳಿಂದ ನೋಡಿದ್ದೇನೆ. ಸತ್ತು ಹೋಗಿದ್ದಂಥ ಕೃಷಿ ಇಲಾಖೆಯನ್ನು ಬಹಳ ಚೈತನ್ಯಪೂರ್ಣವಾಗಿ ಮಾಡಿರತಕ್ಕದ್ದನ್ನು ನಾವೆಲ್ಲರೂ ಒಪ್ಪುತ್ತೇವೆ. ಮತ್ತು ಆ ಇಲಾಖೆಯ ಅಧಿಕಾರಿಗಳಲ್ಲಿ ಭಯ, ಭೀತಿ ಹುಟ್ಟಿರತಕ್ಕದ್ದರ ಬಗ್ಗೆ ಎರಡು ಮಾತಿಲ್ಲ. ಇಡೀ ಸದನವೇ ಅದನ್ನು ಒಪ್ಪುತ್ತದೆ. ಮಾನ್ಯ ನಂಜೇಗೌಡರಿಗಾಗಲಿ ಇತರರಿಗಾಗಲಿ ಭಯವೇನಿದೆಯೆಂದರೆ, ತಾವು ರೈತರ ಬಾಗಿಲಿಗೆ ಗೊಬ್ಬರವನ್ನು ಕೊಡುತ್ತೇವೆಂದು ಸಮಾರಂಭ ಮಾಡುತ್ತಿದ್ದೀರಿ, ಕಾಲಕ್ಕೆ ಸರಿಯಾಗಿ ಗೊಬ್ಬರ ಸಿಗಲಿಲ್ಲವೆಂದರೆ ನಾಳೆ ಆ ದುರಂತದ ಅಪಾದನೆ ನಿಮ್ಮ ಮೇಲೆ ಬರುತ್ತದೆ, ನಿಮ್ಮ ಬಗ್ಗೆ ವೈಯಕ್ತಿಕವಾಗಿ ಮಾತನಾಡಬೇಕೆಂದು ನಮ್ಮ ಉದ್ದೇಶವಲ್ಲ. ನೀವು ಹೇಳಿದ ಪ್ರಶ್ನೆ ಆ ತಯಾರಕರು ಏನಿದ್ದಾರೆ ಇವರ ಪಿತೂರಿ ಇದೆ ಎಂದು. ಪಿತೂರಿ ಇರುವುದು ಸ್ಪಷ್ಟ. ತಯಾರಕರ ಪಿತೂರಿ ಪ್ರತಿ ವರ್ಷ ಇದೆ. ಈ ಸಹಾಯಧನವನ್ನೂ ಕೊಡತಕ್ಕಂಥಹವರು ಕೇಂದ್ರ ಸರ್ಕಾರ. ಅದು ಕೊಟ್ಟ ಮೇಲೆ ಸಹಾಯ ಧನವನ್ನು ನಮ್ಮ ರಾಜ್ಯದ ರೈತರು ಉಪಯೋಗಿಸತಕ್ಕಂತಹ ಪರಿಸ್ಥಿತಿ ನಿರ್ಮಾಣ ಆಗಿಲ್ಲವಲ್ಲ ಎನ್ನತಕ್ಕಂತಹ ನೋವು ನನಗೆ ಇದೆ. ಅದು ಪ್ರಶ್ನೆ. ಎರಡನೇ ಪ್ರಶ್ನೆ ನಾನು ಕೇಳಬೇಕೆಂದು ಇದ್ದುದು, ನೀವು ದಕ್ಷರು, ಬಹಳ ಬೇಗ ತತ್‌ಕ್ಷಣದಿಂದ ನೀವು ಕೂಡಲೇ ಪ್ರತಿ ಹಳ್ಳಿ ಹಳ್ಳಿಗೂ ಗೊಬ್ಬರವನ್ನು ಕರೆಂಟ್ ಹೋಗುವ ರೀತಿಯಲ್ಲಿ ತಲುಪಿಸಬೇಕು. ಈ ಒಂದು ವಾತಾವರಣ ತಿಳಿ ಆಗಬೇಕು ಇದು ನಮ್ಮ ಪ್ರಶ್ನೆ. ಅನೇಕ ಸಾರಿ ನಾವು ನಂಜೇಗೌಡರು ಈ ಇಲಾಖೆಗೆ ಒಂದು ಶಕ್ತಿ ಬಂದಿದೆ ಎಂದು ನಾವು ಮಾತನಾಡಿದ್ದೇವೆ. ಮಾನ್ಯ ಯಡಿಯೂರಪ್ಪನವರು, ಇಡೀ ಈ ಸದನವೇ ನಿಮ್ಮ ಬಗ್ಗೆ ಒಂದು ಒಳ್ಳೆಯ ಸದಭಿಪ್ರಾಯವನ್ನೂ ಹೊಂದಿದೆ, ನೀವು ಒಬ್ಬ ಒಳ್ಳೆಯ ದಕ್ಷ ಮಂತ್ರಿ, ಎನ್ನತಕ್ಕಂಥದ್ದನ್ನು ನಾವು ಪ್ರಾಮಾಣಿಕವಾಗಿ ಸಾವಿರಾರು ಜನರಿಗೆ ಹೇಳಿದ್ದೇವೆ. ಆದರೆ ತಮಗೆ ನಾನು ಹೇಳುತ್ತಿದ್ದೇನೆ, ಆ ದಕ್ಷ ಎನ್ನತಕ್ಕಂತಹ ಪದಕ್ಕೆ ಬದಲಾವಣೆ ಬಾರದೆ ಇರುವ ರೀತಿಯಲ್ಲಿ ತಾವು ಇಡೀ ರಾಜ್ಯದ ಎಲ್ಲಾ ರೈತರಿಗೂ ಯಾವುದೇ ತೊಂದರೆಯಾಗದ ರೀತಿಯಲ್ಲಿ ಈಗ ಮಳೆ ಬರುತ್ತಿರುವುದರಿಂದ ಯಾವ ಕಡೆಯಿಂದಲೂ ಪೋಲೀಸ್‌ನವರು ಅಲ್ಲಿ ದಾಳಿ ಮಾಡದೆ ಇರುವ ರೀತಿಯಲ್ಲಿ, ಆ ರೈತರಿಗೆ ಸರಿಯಾಗಿ ಗೊಬ್ಬರ ಕೊಡಬೇಕೆಂದು ರೈತರು ಸಾಲು ನಿಂತಾಗ ಅಲ್ಲಿ ಯಾವ ತರಹದ ಗೊಂದಲವಾಗದೇ, ಯಾವುದೇ ಒಂದು ಸಣ್ಣ ಘಟನೆಗೂ ಅವಕಾಶ ಆಗದೇ ಇರುವ ರೀತಿಯಲ್ಲಿ ನೋಡಬೇಕಾದುದು ತಮ್ಮ ಕರ್ತವ್ಯ. ನಾನು ಮತ್ತೊಮ್ಮೆ ತಮ್ಮನ್ನು ಅಭಿನಂದಿಸುತ್ತೇನೆ. ಆ ಇಲಾಖೆಗೆ ಬಹಳ ಶಕ್ತಿ ಕೊಟ್ಟಿದ್ದೀರಿ

ಎನ್ನುವುದರ ಬಗ್ಗೆ ಎರಡು ಅಭಿಪ್ರಾಯವಿಲ್ಲ.

SRI H.N.NANJEGOWDA:- I am really wounded. I am hurt. ನಾನು ಅವರಿಗೆ ಒಂದು ದಿನವೂ ಫೋನ್ ಮಾಡಲಿಲ್ಲ. ಈಗ ನಾನು ಅವರ ವಕಾಲತ್ತು ವಹಿಸಿಕೊಳ್ಳುವುದಾದರೆ ಅವರ ಹತ್ತಿರ 10 ಸಾರಿ.... Is that the way to remark against me? Should I deserve such a comment from a senior Minister? ಯಾರ ಪರ ಮಾತನಾಡುತ್ತೀರಿ ಎಂದು ಹೇಳಿದರು, ನಾನು ಯಾರ ಪರ ಮಾತನಾಡುತ್ತಿದ್ದೇನೆ, ಯಾವ ಗೊಬ್ಬರ ಕಂಪನಿಗಳೂ ಒಂದೂ ನನಗೆ ಗೊತ್ತಿಲ್ಲ. ನಾನು ನೀರಾವರಿ ವಿಚಾರದಲ್ಲಿ ಸ್ವಲ್ಪ ತಿಳಿದುಕೊಂಡಿರಬಹುದು, ಯಾರ ಕಂಪನಿ ಇದೆ, ಯಾರು ಗೊಬ್ಬರದ ಏಜೆಂಟ್ ಇದ್ದಾರೆ, ಯಾರು ಮಾರಾಟ ಮಾಡುತ್ತಾರೆ That is not my concern. I was only concerned about the farmer but should I receive such a remark from him? ಯಾರ ಪರ ನಾನು ಮಾತನಾಡುತ್ತೇನೆ.....

ಶ್ರೀ ಸಿ.ಬೈರೇಗೌಡ:- ಎಷ್ಟು ಸಾರಿ ಹೇಳಬೇಕು.... ಕಾನೂನಿನಲ್ಲಿ ಏನಿದೆ ದಯವಿಟ್ಟು ಕೇಳಿ.....

(ಗೊಂದಲ)

SRI H.N.NANJEGOWDA:- Should you talk to me like that? Do I deserve such a comment from you?

ಶ್ರೀ ಸಿ.ಬೈರೇಗೌಡ:- ನಾವು ಇವತ್ತು ಪರೋಕ್ಷವಾಗಿ ಏಕೆ ಒಪ್ಪಲಿಲ್ಲ.... ಅದು ನಾನು ಒಪ್ಪುವುದಕ್ಕೆ ತಯಾರಿಲ್ಲ.

ಶ್ರೀ ಎಂ.ಮಲ್ಲಿಕಾರ್ಜುನ ಖರ್ಗೆ:- ಅಧ್ಯಕ್ಷರೆ, ಒಂದು ಏನೆಂದರೆ ಅವರು ಆವೇಶದ ಭರದಲ್ಲಿ ಹೇಳಿದರೋ ಏನೋ ನನಗೆ ಗೊತ್ತಾಗಲಿಲ್ಲ. ಅವರು ಮಾತನಾಡುವಾಗ ''ನೀವು ಯಾರ ಪರ ಮಾತನಾಡುತ್ತಿದ್ದೀರಿ ನನಗೆ ಗೊತ್ತಿದೆ, ಎಂದರೆ'' ಹಾಗೆ ಅವರು ಮಾತನಾಡತಕ್ಕಂತಹ ಧಾಟಿ, ಇವರು ಯಾರ ಕಡೆಯಿಂದ ವಕಾಲತ್ತು ವಹಿಸಿಕೊಂಡು ಇಲ್ಲಿ ಬಂದು ಮಾತನಾಡುತ್ತಿದ್ದಾರೆ ಎನ್ನತಕ್ಕಂಥದ್ದು ಬಂತು, ಮುಂದೆ ಅವರು ತಮ್ಮ ಆರ್ಗ್ಯುಮೆಂಟ್‌ನಲ್ಲಿ ಹೇಳಲಿಲ್ಲ ಇದನ್ನು ಹೇಳಿ ಯಾವುದೋ ಒಂದು ಫ್ಯಾಕ್ಟರಿ ಪರವಾಗಿ ಇವರ ಪರವಾಗಿ ಮಾತನಾಡುತ್ತಿದ್ದೀರಿ ಅಥವಾ ಯಾರೋ ಏಜೆಂಟಾಗಿ ಎನ್ನತಕ್ಕಂತಹ ಭಾವನೆಯಿಂದ ನಾನು ಮಾತನಾಡಲಿಲ್ಲ. ನಾನು ಒಂದು ದೃಷ್ಟಿಯಿಂದ ಮಾತನಾಡಿದ್ದೇನೆ ಎನ್ನತಕ್ಕಂಥದ್ದು ಕೂಡ ಅವರು ಪುನಃ ಹೇಳಲಿಲ್ಲ. ಇದರಿಂದ ಇದು ಏನಾಗುತ್ತದೆ, ಅದು ರೇಕಾರ್ಡ್‌ನಲ್ಲಿ ಬಂದ ಮೇಲೆ, ಬೇರೆಯವರಿಗೂ ಈ ಸದನದಲ್ಲಿ ಇರತಕ್ಕಂತಹ ಸದಸ್ಯರಿಗೂ ಕೂಡ ಒಂದು ಸಂಶಯ ಬರುತ್ತದೆ, ಏನೋ ನಂಜೇಗೌಡರು ಯಾರದೋ ಪರವಾಗಿ ಮಾತನಾಡುತ್ತಿದ್ದಾರೆ. ಆ ಮಾತು ಅವರಿಗೆ ಗೊತ್ತಿರಬಹುದು. ಅದಕ್ಕಾಗಿ

ಅವರು ಈ ರೀತಿಯಾಗಿ ಮಾತನಾಡಿದರು ಎನ್ನುತಕ್ಕಂತಹ ಭಾವನೆ ಬರುತ್ತದೆ. ದಯವಿಟ್ಟು ಅದನ್ನು ಕಡತದಿಂದ ತೆಗೆಸಿ ಅದನ್ನು ಕ್ಲೋಸ್ ಮಾಡಿ ಬಿಡಿ.

MR.SPEAKER:- Other than that also, ನಾನು ಸದನಕ್ಕೆ ಏನು ಅಪೀಲ್ ಮಾಡಿಕೊಳ್ಳುತ್ತೇನೆಂದರೆ, ಶ್ರೀ ಹೆಚ್.ಎನ್.ನಂಜೇಗೌಡರಾಗಲಿ, ವೀರಪ್ಪಮೊಯಿಲಿಯವರಾಗಲಿ, ಎಂ.ವೈ.ಘೋರ್ಪಡೆಯವರಾಗಲಿ ಮತ್ತು ಮಾಟಾಳ್‌ರವರೇ ಆಗಲಿ by virtue of their experience and long standing stay in the Assembly we treat them as the asset of the House. I don't partition them to their respective political parties also. ಬಹಳ ಜಾಗ್ರತೆಯಿಂದ ಅವರನ್ನು ನಾವು ನಡೆಸಿಕೊಳ್ಳಬೇಕಾಗುತ್ತದೆ. ಈ ಸದನಕ್ಕೆ ನಮಗೆ ಏನು ಸಂದಿಗ್ಧತೆ ಬಂದರೂ, ತೊಂದರೆ ಬಂದರೂ, ಆತಂಕ ಬಂದರೂ ಕೂಡ ಅವರ ಮಾರ್ಗದರ್ಶನವನ್ನು ಎದುರು ನೋಡುತ್ತೇವೆ. ಬಹಳ ವರ್ಷಗಳಿಂದ ಅವರು ಇಲ್ಲಿ ದುಡಿದು ಶ್ರಮ ಪಟ್ಟು ಕೆಲಸ ಮಾಡಿದ್ದಾರೆ. ಅವರ ಮಾತಿನ ಧೋರಣೆ ಏನಿದೆ ಅವರು ಆವೇಶದಲ್ಲಿ ಯಾರಿಗೂ ಉದ್ದೇಶಪೂರ್ವಕವಾಗಿ ಹೇಳಿದ್ದು ಅಲ್ಲ, ಅದರ ಅರ್ಥ ಅದೇ ಆಗುತ್ತದೆ. ಆದ್ದರಿಂದ, ನಾನು ಆಗಲೇ ಅಪೀಲ್ ಮಾಡಿಕೊಂಡಿದ್ದೇನೆ, ಮತ್ತೊಮ್ಮೆ ಪತ್ರಿಕೆಯವರಿಗೂ ಕೂಡ ನಾನು ವಿನಂತಿ ಮಾಡಿಕೊಳ್ಳುತ್ತೇನೆ. ಅದು ಕಡತದಲ್ಲಿ ಹೋಗುವುದಿಲ್ಲ. ಸನ್ಮಾನ್ಯ ನಂಜೇಗೌಡರಿಗೆ ಆ ರೀತಿ ಮಾತನಾಡತಕ್ಕಂತಹ ಅಭಿಪ್ರಾಯ ಖಂಡಿತ ಭೈರೇಗೌಡರ ಮನಸ್ಸಿನಲ್ಲಿ ಇರಲಿಕ್ಕಿಲ್ಲ. ಇಡೀ ಸದನದಲ್ಲಿ ಯಾರೂ ನಿಮ್ಮನ್ನು ಆ ರೀತಿ ನೋಡತಕ್ಕಂಥದ್ದು ಅಲ್ಲ. ಸನ್ಮಾನ್ಯ ಹಿರಿಯ ಸದಸ್ಯರಾದ ನಂಜೇಗೌಡರ ಮನಸ್ಸಿಗೆ ನೋವಾಗಿದ್ದರೆ, ಇಡೀ ಸದನ ಮತ್ತು ನಾವು ಅದಕ್ಕೆ ತಮ್ಮಲ್ಲಿ ವಿನಂತಿ ಮಾಡಿಕೊಳ್ಳುತ್ತೇವೆ. ತಾವು ಮನಸ್ಸಿಗೆ ಗಾಯ ಮಾಡಿಕೊಳ್ಳಬೇಕಾಗಿಲ್ಲ, ನಿಮ್ಮನ್ನು ಎಂದೂ ಕೂಡ ಈ ಸದನ ಆ ರೀತಿ ನೋಡುವುದಿಲ್ಲ, ಅತ್ಯಂತ ಗೌರವದಿಂದ ನಾವು ನಿಮ್ಮನ್ನು ನೋಡುತ್ತೇವೆ. ದಯಮಾಡಿ ಈ ಒಂದು ಕಹಿ ಪ್ರಸಂಗ ಏನು ನಡೆದಿದೆ ಇದನ್ನು ಮರೆತು ಬಿಡಬೇಕೆಂದು ನಾನು ತಮ್ಮಲ್ಲಿ ವಿನಂತಿ ಮಾಡಿಕೊಳ್ಳುತ್ತೇನೆ. I will not allow it to go into the record.

ಶ್ರೀ ಬಿ.ಎಸ್.ಯಡಿಯೂರಪ್ಪ:- ಸ್ವಾಮಿ, ಮೂಲ ಸಮಸ್ಯೆ ಯಾರ ಪರವಾಗಿ ನಾವು ಇಲ್ಲಿ ಬಂದಿದ್ದೇವೆ ಎನ್ನುವುದನ್ನು ಮರೆತು ಅಪಾರ್ಥಕ್ಕೆ ಕೆಲವು ಸಾರಿ ಇಲ್ಲಿ ಅವಕಾಶವಾಗುತ್ತದೆ. ಇಲ್ಲಿ ತಾವು ಏನು ಹೇಳಿದ್ದೀರಿ ರೆಕಾರ್ಡ್‌ನಲ್ಲಿ ಯಾವುದು ಇರಬೇಕು, ಯಾವುದು ಇಲ್ಲ, ಅದನ್ನು ತಾವು ತೀರ್ಮಾನ ಮಾಡಿದಿರಿ. ಒಂದೇ ಒಂದು ಬಹುಶಃ ಅದು ಅಲ್ಲಿಗೇ ಮುಗಿದಿದೆ ಎಂದು ನಾನು ತಿಳಿದುಕೊಂಡು ಮುಂದೆ ಹೋಗುತ್ತಿದ್ದೇನೆ. ಪ್ರಾಮಾಣಿಕರಾಗಿದ್ದಾಕ್ಷಣಕ್ಕೆ, ದಕ್ಷರಾಗಿದ್ದಾಕ್ಷಣಕ್ಕೆ ಅದಕ್ಕೆ ಬೇರೆ ಸರ್ಟಿಫಿಕೇಟ್, ನಮ್ಮ ಮಾಟಾಳ್ ನಾಗರಾಜ್‌ರವರು ಕೊಡುವಂತಹ ಸರ್ಟಿಫಿಕೇಟ್ ವೈಯಕ್ತಿಕವಾಗಿ ನಿಮಗೆ ಕೊಟ್ಟಿರಬಹುದು. ವಾಸ್ತವಿಕವಾಗಿ ರಾಜ್ಯದ ರೈತರ ಹಿತವನ್ನು

ಕಾಪಾಡುವಂತಹ ಒಂದು ಇಲಾಖೆಯನ್ನು ನಿಮಗೆ ಕೊಟ್ಟಾಗ, ನೀವು ಹೇಗೆ ನಡೆದುಕೊಂಡಿರಿ ಅಂದಾಗ, ಹಿಂದಿನ ವರ್ಷದ ಉದಾಹರಣೆ ತೆಗೆದುಕೊಂಡಾಗ, ಆ ಇಲಾಖೆಗೆ ನೀವು ಆ ರೀತಿ ದಕ್ಷರಾಗಿ ಕೆಲಸ ಮಾಡಲಿಲ್ಲ. ಏಕೆ ಈ ಮಾತನ್ನು ನಾನು ಹೇಳುತ್ತಿದ್ದೇನೆ ತಾವು ವಿವರವನ್ನು ಕೊಡಿ. ನಂಜೇಗೌಡರು ಕೇಳಿದಂತೆ ಹೋದ ವರ್ಷ ಸಹ ರೈತ ಈ ಸಂಕಷ್ಟದಲ್ಲಿ ಸಿಕ್ಕಾಗ ಕೇಂದ್ರ ಸರ್ಕಾರ ಈ ಕಾಂಪ್ಲೆಕ್ಸ್ ಗೊಬ್ಬರಕ್ಕೆ ಕೊಟ್ಟಂತಹ ಸಬ್ಸಿಡಿಯನ್ನು ನಾವು ಉಪಯೋಗ ಮಾಡಿಕೊಳ್ಳುವುದಕ್ಕೆ ಆಗಲಿಲ್ಲ. ಈ ಮನೆಯಲ್ಲಿ ನಾನು ಅದರ ಬಗ್ಗೆ ಚರ್ಚೆ ಮಾಡಿದೆ, ಅವರ ಹತ್ತಿರ ನಾನು ಮಾತನಾಡಿದೆ, ಆದರೂ ಸಹ ನನ್ನ ಅಂದಾಜಿನ ಪ್ರಕಾರ 80 ಕೋಟಿ ರೂಪಾಯಿ ಕೇಂದ್ರ ಸರ್ಕಾರದ ಸಬ್ಸಿಡಿಯನ್ನು ನಾವು ಉಪಯೋಗ ಮಾಡಿಕೊಳ್ಳುವುದಕ್ಕಾಗುವುದಿಲ್ಲ. ಇದೇ 17, ಇದೇ 15 ಆದರೂ ಸಹ ನಮಗೆ ಕಡಿಮೆ ಬೆಲೆಗೆ ಸಿಗಲಿಲ್ಲ. ಜನ ಅದನ್ನು ಹಾಕಿ ಅಭ್ಯಾಸ ಆಗಿ ಬಿಟ್ಟಿರುವುದರಿಂದ ಹತ್ತಾರು ವರ್ಷಗಳಿಂದ ರೈತರ ಒಂದು ಹುಚ್ಚಿನಲ್ಲಿ, ಹೊರ ರಾಜ್ಯದಿಂದ ಅದೇ ಗೊಬ್ಬರವನ್ನು ಇಲ್ಲಿ ತಂದು ಒಂದು ಚೀಲಕ್ಕೆ 60-70 ರೂಪಾಯಿ ಜಾಸ್ತಿ ಕೊಟ್ಟು, ಸಬ್ಸಿಡಿ ಇಲ್ಲದೆ ರೈತ ತಲೆ ಬೋಳಿಸಿಕೊಂಡ. ಈಗ ಪ್ರಸ್ತುತ ನನಗೆ ಗೊತ್ತಿರುವ ಅಂದಾಜಿನ ಪ್ರಕಾರ ಜುಲೈ 16ನೇ ತಾರೀಖಿನಿಂದ ಕಾಂಪ್ಲೆಕ್ಸ್ ಗೊಬ್ಬರವನ್ನು ತಯಾರು ಮಾಡತಕ್ಕಂತಹ ಕಾರ್ಖಾನೆ ಮಾಲೀಕರು ಒಂದು ಹೊಸ ದರವನ್ನು ನಿಗಧಿ ಮಾಡಿದ್ದಾರೆ. ಅನ್‌ಫಾರ್ಚುನೇಟ್ ಅಂದರೆ ನಮ್ಮ ಕೇಂದ್ರ ಸರ್ಕಾರದ ನೀತಿಯಿಂದ, ಯೂರಿಯಾ ಬಗ್ಗೆ ಮಾತ್ರ ಕಂಟ್ರೋಲ್ ಇಟ್ಟುಕೊಂಡು, ಇತರ ಎಲ್ಲಾ ಗೊಬ್ಬರಗಳಿಗೆ ಕಂಟ್ರೋಲ್ ತೆಗೆದು ಹಾಕಿರುವುದರಿಂದ ಪ್ರತಿ ವರ್ಷ ಈ ಕಾರ್ಖಾನೆ ಮಾಲೀಕ ರೈತರನ್ನು ಶೋಷಣೆ ಮಾಡಿ ಮನ ಬಂದಂತೆ ಗೊಬ್ಬರದ ಬೆಲೆಯನ್ನು ಏರಿಸುವಂಥ ಪರಿಪಾಠ ಹಾಕಿಕೊಂಡು ಬರುತ್ತಿದ್ದಾನೆ. ಇವತ್ತು ಇರುವಂಥದ್ದು ಇನ್ನು 10 ಪಟ್ಟು ಜಾಸ್ತಿ ಆಗಿ ರೈತ ಬೀದಿ ಪಾಲಾಗುವಂತಹ ಸಂದರ್ಭ ಇದೆ. ಅದಕ್ಕೆ ನಾವು ಕೇಂದ್ರ ಸರ್ಕಾರಕ್ಕೆ ಒತ್ತಾಯ ಮಾಡಬೇಕು. ಪಾಲಿಸಿ ಮ್ಯಾಟರ್ ಆಗುತ್ತದೆ, ಅದಕ್ಕೆ ಒತ್ತಾಯ ಮಾಡೋಣ. ಕಳೆದ 15-20 ದಿವಸಗಳ ಹಿಂದೆ ಕೆಲವು ಕಡೆ ಗೊಬ್ಬರವನ್ನು ಉಪಯೋಗ ಮಾಡುವುದಕ್ಕೆ ಪ್ರಾರಂಭವಾಗಿದೆ. ಕೇಂದ್ರ ಸರ್ಕಾರದ ಸಬ್ಸಿಡಿ ನಮಗೆ ಉಪಯೋಗವಾಗುತ್ತಿಲ್ಲ. ದೇವರ ದಯೆಯಿಂದ ಅನೇಕ ವರ್ಷಗಳಿಂದ ನಮ್ಮ ಹೋರಾಟದ ಪರಿಣಾಮವಾಗಿ 1500ರಿಂದ 3000 ರೂಪಾಯಿಯವರೆಗೆ ಸಬ್ಸಿಡಿಯನ್ನು ಕೇಂದ್ರ ಸರ್ಕಾರ ಘೋಷಣೆ ಮಾಡಿದೆ. ಇವತ್ತು 16ನೇ ತಾರೀಖು ಜುಲೈನಲ್ಲಿ ಬೇರೆ ಬೇರೆ ಬೆಲೆ ನಿಗದಿ ಮಾಡಿದ್ದಾರೆ. ನಮ್ಮ ಒತ್ತಾಯ ಎಲ್ಲದಕ್ಕೂ 3000 ರೂಪಾಯಿ ಕೊಡಬೇಕು ಎಂದು ಇದೆ. ಆ ಗೊಬ್ಬರಕ್ಕೆ ಇಲ್ಲ, ಈ ಗೊಬ್ಬರಕ್ಕೆ ಇಲ್ಲ, ಎಂದರೆ ರೈತರನ್ನು ಡಿಸ್ಪಿಂಗ್ವಿಷ್ ಮಾಡುವ ಅಗತ್ಯವಿಲ್ಲ. ನಾವು ಒತ್ತಾಯ ಮಾಡುತ್ತಿದ್ದೇವೆ ಅದು ಆಗದೆ ಇದ್ದರೆ ದೊಡ್ಡ ಹೋರಾಟ ಮಾಡುತ್ತೇವೆ. ಕೇಂದ್ರ ಸರ್ಕಾರಕ್ಕೆ ಒತ್ತಾಯ ಮಾಡೋಣ. ಈ ರಸಗೊಬ್ಬರದ ಕಾರ್ಖಾನೆ ಮಾಲೀಕರು ಕಾಂಪ್ಲೆಕ್ಸ್ ಗೊಬ್ಬರಕ್ಕೆ ಜೂನ್ 16ನೇ ತಾರೀಖು ಅವರದೇ ಆದ ಬೆಲೆಯನ್ನು ನಿಗದಿ ಮಾಡಿದ ಮೇಲೆ, ಬೇರೆ ಎಲ್ಲಾ ರಾಜ್ಯಗಳಿಂದ ಗೊಬ್ಬರವ ಉಪಯೋಗ ಮಾಡಿಕೊಂಡು, ಸಬ್ಸಿಡಿ ಉಪಯೋಗ ಮಾಡಿಕೊಡುತ್ತಾ, ಇರುವಂತಹ

ಕಾಲದಲ್ಲಿ ಸರ್ಕಾರ ಅದ್ಯತೆ ಮೇಲೆ ಕಾರ್ಖಾನೆ ಮಾಲೀಕರ ಕಿವಿ ಹಿಂಡಿ ನೀವೇ ನಿಗದಿ ಮಾಡಿದ್ದೀರಿ, ಆ ಬೆಲೆಗೆ ಅವನು ಕೊಂಡು ಕೊಳ್ಳುವ ಹಾಗೆ ಮಾಡಿ, ಅವನು ಬಗ್ಗುವ ಹಾಗೆ ಮಾಡಿ, ಅವನಿಗೆ ಚಾಟಿ ಏಟು ಕೊಟ್ಟು ಅವರಿಗೆ ಬೇಕಾದರೆ ಸವಲತ್ತು ಮಾಡಿ ಕೊಟ್ಟು, ಈ ಗೊಬ್ಬರದ ಬೆಲೆ ಹೆಚ್ಚು ಆಗುವುದಕ್ಕೆ ಸಾಧ್ಯವಿಲ್ಲವೆಂದು, ಅವನು ಈ ಗೊಬ್ಬರವನ್ನು ನಿಮ್ಮ ಬೆಲೆಗೆ ಮಾರುವುದಕ್ಕೆ ವ್ಯವಸ್ಥೆ ಮಾಡಿ, ಸಬ್ಸಿಡಿ ಉಪಯೋಗ ಮಾಡಿಕೊಳ್ಳುವುದರಲ್ಲಿ ನೀವು ಸಂಪೂರ್ಣವಾಗಿ ವಿಫಲರಾಗಿದ್ದೀರಿ. ಹೀಗಾಗಿ ಕಳೆದ ಒಂದು ತಿಂಗಳಿನಿಂದ ರೈತ ನಮ್ಮ ರಾಜ್ಯದ ರಸಗೊಬ್ಬರ ಯೂರಿಯಾ ಬಿಟ್ಟು, ಕಾಂಪ್ಲೆಕ್ಸ್ ಗೊಬ್ಬರವನ್ನು ಉಪಯೋಗ ಮಾಡುತ್ತಿದ್ದಾನೆ. ರಾಜ್ಯದಲ್ಲಿ ಆ ಸಬ್ಸಿಡಿ ಉಪಯೋಗ ಅಲ್ಲ. ಹಳೆಯದು ಇರಬಹುದು, ಹೊಸದು ಇರಬಹುದು ಇದು ಒಂದು ಭಾಗ. ಹಳೆಯ ಗೊಬ್ಬರವನ್ನು ಹೊಸ ಬೆಲೆಗೆ ಮಾರುಕಟ್ಟೆಯಲ್ಲಿ ಮಾರಾಟ ಮಾಡುತ್ತಿದ್ದಾರೆ. ಆ ವ್ಯಾಪಾರಸ್ಥರ ಮೇಲೆ ಕ್ರಮ ತೆಗೆದುಕೊಳ್ಳವುದು ಇನ್ನೊಂದು ವಿಷಯ. ಬಹಳ ಪ್ರಮುಖವಾಗಿರತಕ್ಕಂಥದ್ದು ಲಕ್ಷಾಂತರ ಜನರಿಗೆ ಅನುಕೂಲ ಆಗುವಂತಹ ಈ ಸಬ್ಸಿಡಿ ಉಪಯೋಗ ಮಾಡಿಕೊಳ್ಳುವುದರ ಬಗ್ಗೆ ನೀವು ಬೇರೆ ಮಿಕ್ಸ್ ಮಾಡಿ ಎನ್ನುವುದನ್ನು ರೈತನಿಗೆ ಹೇಳುತ್ತಿದ್ದೀರಿ. ತಾವು ಏನು ಮಾಡುತ್ತಿದ್ದೀರಿ, ಅದು ಪರಿಣಾಮಕಾರಿಯಾಗಿ ರೈತನಿಗೆ ಕಡಿಮೆ ದರದಲ್ಲಿ ಕೊಡುವುದಕ್ಕೆ ಪ್ರಯತ್ನ ಮಾಡಿ, ಆಗ ನಾನೂ ಸ್ವಾಗತ ಮಾಡುತ್ತೇನೆ. ಆದರೆ ಈಗ ನೀವು ಇನ್ನು 24 ಗಂಟೆಯೊಳಗೆ ಆ ಕಾಂಪ್ಲೆಕ್ಸ್ ಗೊಬ್ಬರ ಯಾವ ರೈತ ಉಪಯೋಗ ಮಾಡುತ್ತಾರೆ, ನೀವು ಕಾರ್ಖಾನೆ ಮಾಲೀಕರ ಜೊತೆ ನೀವು ಆ ಬೆಲೆ ನಿಗದಿ ಮಾಡಿ ಸಬ್ಸಿಡಿ ಸಿಗುವ ಹಾಗೆ ಮಾಡಿ. ★★ ಯಾವಾಗ ಬಂತು, ಅದರಿಂದ ಪರಿಸ್ಥಿತಿ ಹೀಗಾಗಿದೆ. ಇವತ್ತಿನ ದಿವಸ ಈ ಕಂಟ್ರೋಲ್ ತೆಗೆದ ಮೇಲೆ ಆಯಾ ರಾಜ್ಯಗಳಲ್ಲಿ ★★ ಇದರ ಬಗ್ಗೆ ನಮ್ಮ ವಿರೋಧ ಇದೆ. ಕರ್ನಾಟಕ ರಾಜ್ಯದಲ್ಲಿ ನೀವು ಕಡಿಮೆ ಮಾಡಿದರೆ ನಿಮಗೆ ಸ್ವಾಗತ ಮಾಡುತ್ತೇನೆ ನಿಮಗೆ ವಾಟಾಳ್ ನಾಗರಾಜ್‌ರವರು ಏನು ಅಭಿನಂದನೆ ಸಲ್ಲಿಸಿದ್ದಾರೆ, ಹಾಗೆಯೇ ನಾವು ಅಭಿನಂದನೆ ಸಲ್ಲಿಸುತ್ತೇವೆ. 24 ಗಂಟೆಯಲ್ಲಿ ಈ ಕಾಂಪ್ಲೆಕ್ಸ್ ಮತ್ತು ಇತರೆ ಗೊಬ್ಬರವನ್ನೂ ಕೇಂದ್ರ ಸರ್ಕಾರದ ಸಬ್ಸಿಡಿ ಪಡೆದು ಮಾಡುವುದಕ್ಕೆ ವ್ಯವಸ್ಥೆ ಮಾಡಬೇಕು. ಇಲ್ಲದೆ ಹೋದರೆ ಈ ಸರ್ಕಾರಕ್ಕೆ ರೈತರ ಬಗ್ಗೆ ಕಳಕಳಿ ಇಲ್ಲ. ಯಾವುದೋ ಒಳ ವ್ಯವಹಾರ ಮಾಡಿಕೊಂಡು ರೈತರಿಗೆ ದ್ರೋಹ ಮಾಡುತ್ತಿದ್ದಾರೆಂದು ವಾಕ್ ಔಟ್ ಮಾಡುತ್ತೇನೆ. ನಾಳೆ ಬಂದು ಈ ಗೊಬ್ಬರ ವಿತರಣೆ ಮಾಡುವ ವ್ಯವಸ್ಥೆ ನೀವು ಮಾಡದೇ ಇದ್ದರೆ, ಮತ್ತೆ ನಾವು ಇಲ್ಲಿ ಬಂದು ನಮ್ಮ ಮುಂದಿನ ಕಾರ್ಯಕ್ರಮ ಮಾಡಬೇಕಾಗುತ್ತದೆ.

ಅಧ್ಯಕ್ಷರು:- ಒಂದು ನಿಮಿಷ ಕುಳಿತುಕೊಳ್ಳಿ.

(ಈ ಸಂದರ್ಭದಲ್ಲಿ ಬಿ.ಜೆ.ಪಿ.ಯ ಎಲ್ಲಾ ಸದಸ್ಯರು ವಾಕೌಟ್ ಮಾಡಿದರು)

ಶ್ರೀ ಸಿ.ಭೈರೇಗೌಡ:- ಮಾನ್ಯ ಅಧ್ಯಕ್ಷರೇ ದಯವಿಟ್ಟು ನನಗೆ ಅವಕಾಶ

★★ Expunged as ordered by the chair.

ಮಾಡಿಕೊಡಬೇಕು. ಏಕೆಂದರೆ ಅವರು ಕೆಲವು ಮಾತನ್ನು ಬಳಸಿದ್ದಾರೆ. ★★... ಈ ಮಾತನ್ನು ನಾನು ಕೇಳುವುದಕ್ಕೆ ತಯಾರಿಲ್ಲ. ಯಾವುದನ್ನು ಬೇಕಾದರೂ ನಾನು ಕೇಳುವುದಕ್ಕೆ ತಯಾರಿದ್ದೇನೆ ಆದರೆ ಈ ರೀತಿಯಾದಂಥ ವ್ಯಥೆಯನ್ನು ನಾನು ಕೇಳುವುದಕ್ಕೆ ತಯಾರಿಲ್ಲ. ಬಾಯಿಗೆ ಬಂದ ಹಾಗೆ ಹರಟೆ ಹೊಡೆದುಕೊಂಡು ಅವರು ಹೋಗುವುದಕ್ಕೆ ಆಗುವುದಿಲ್ಲ. ★★ ಯಾರ ಪರವಾಗಿ ಇವೊತ್ತಿನ ದಿವಸ ವಾದ ಮಾಡುತ್ತಿದ್ದಾರೆ ಇಲ್ಲಿ? ಬೆಲೆ ಹೆಚ್ಚಳ ಇಲ್ಲ ಎನ್ನತಕ್ಕಂಥದ್ದನ್ನು ನಾನು ಸ್ಪಷ್ಟವಾಗಿ ಹೇಳಿದ್ದೇನೆ. ಬೆಲೆ ಹೆಚ್ಚಿಸಬೇಕು ಎಂದು ಪರೋಕ್ಷವಾಗಿ ಅವರು ಯಾರ ಪರವಾಗಿ ಇಲ್ಲಿ ಹೇಳುತ್ತಿದ್ದಾರೆ. ಅದನ್ನು ಒಪ್ಪಿಕೊಳ್ಳುವುದಕ್ಕೆ ತಯಾರಿಲ್ಲ.

ಶ್ರೀ ಎಂ.ಮಲ್ಲಿಕಾರ್ಜುನ ಖರ್ಗೆ:- ಈಗ ಅವರ ಧೋರಣೆ ನೋಡಿದರೆ ನನಗನಿಸುತ್ತದೆ. ಭೈರೇಗೌಡರಿಗೆ ಈ ಸಮಸ್ಯೆಯನ್ನು ಬಗೆಹರಿಸಬೇಕು ಎಂದು ಮನಸ್ಸಿನಲ್ಲಿ ಇಲ್ಲ ಎಂದು ಸ್ಪಷ್ಟವಾಗುತ್ತಿದೆ. ಏಕೆಂದರೆ ಪ್ರತಿಯೊಂದಕ್ಕೂ ತಮ್ಮದೇ ಆದಂಥ ವಾದವನ್ನು ಇಡುತ್ತಾರೆ. ಅವರಿಗೆ ಏನು ಗೊತ್ತು? ಇವರಿಗೇನು ಗೊತ್ತು ಯಾರ ಪರವಾಗಿ ಇವರು ಮಾತನಾಡುತ್ತಿದ್ದಾರೆ, ಎನ್ನತಕ್ಕಂಥದ್ದು ಈ ರೀತಿಯಾಗಿ ಇಲ್ಲಿ ಯಾವುದೇ ಒಬ್ಬ ಸದಸ್ಯರು ಇಂಥದ್ದರ ಬಗ್ಗೆ ಪರಿಹಾರ ಕೇಳಿದರೆ ನೀವು ಅವರಿಗೆ ಒಂದು ಮೋಟೀವ್ ಅಟ್ಯಾಚ್ ಮಾಡಿ.

(ಗೊಂದಲ)

ಸರ್ಕಾರಕ್ಕೆ ಈ ಸಮಸ್ಯೆಯನ್ನು ಗಂಭೀರವಾಗಿ ತೆಗೆದುಕೊಳ್ಳತಕ್ಕಂಥ ಆಸಕ್ತಿ ಇಲ್ಲ. ಈ ಸಮಸ್ಯೆ ಪರಿಹಾರ ಮಾಡಬೇಕು ಎನ್ನತಕ್ಕಂಥದ್ದು ಕೂಡ ಅವರ ಮನಸ್ಸಿನಲ್ಲಿ ಇಲ್ಲ. ಮತ್ತು ಪ್ರತಿಯೊಂದು ಹೋಬಳಿಯಾಗಿ ನಾವು ಈ ರೀತಿಯಾಗಿ ಮಿಕ್ಸ್‌ರ್ ಮಾಡಿ ಗೊಬ್ಬರ ಹಂಚುತ್ತೇವೆ ಎನ್ನತಕ್ಕಂಥದ್ದು ಏನು ಇದೆ ಅದು ಆಗುವುದಿಲ್ಲ. ಇದನ್ನೆಲ್ಲಾ ನೋಡಿದರೆ ಇಂಪ್ರಾಕ್ಟಿಕಲ್ ಸಲಹೆಯನ್ನು ಅವರು ಏನು ಕೊಡುತ್ತಿದ್ದಾರೆ ಇದನ್ನು ನಾವು ನೋಡಿದಾಗ ನಿಜವಾಗಲೂ ಇದರ ಬಗ್ಗೆ ಸರ್ಕಾರ ಆಸಕ್ತಿ ವಹಿಸಿ ಕೆಲಸ ಮಾಡಬೇಕು, ಕಾಳಜಿ ಮಾಡಬೇಕು ಎನ್ನತಕ್ಕಂಥದ್ದು ಇಲ್ಲ. ಅದಕ್ಕಾಗಿ ನಾವು ಕೂಡ ಈ ಧೋರಣೆ ವಿರುದ್ಧ ವಾಕೌಟ್ ಮಾಡುತ್ತೇವೆ.

(ಈ ಸಂದರ್ಭದಲ್ಲಿ ಕಾಂಗ್ರೆಸ್ ಪಕ್ಷದ ಸದಸ್ಯರು ವಾಕೌಟ್ ಮಾಡಿದರು)

MR.SPEAKER:- I will take care of that. I will not allow those things to go ingo the records. ನೋಟೀಸ್ ಕೊಡದೆ ಪ್ರಸ್ತಾಪ ಮಾಡಿ ಆ ರೀತಿ ಫೇಗ್ ಅಲಿಗೇಶನ್ ಮಾಡುವುದಕ್ಕೆ ಅವಕಾಶ ಇಲ್ಲ. I will get those words expunged.

ಶ್ರೀ ಸಿದ್ಧರಾಮಯ್ಯ:- ಮಾನ್ಯ ಯಡಿಯೂರಪ್ಪನವರು ಈ ಸರ್ಕಾರ ಅಪರ ಜೊತೆ

★★ Expunged as ordered by the chair.

ಶಾಮೀಲಾಗಿದೆ ಎನ್ನುವ ರೀತಿಯಲ್ಲಿ ಟೀಕಿಸಿದ್ದಾರೆ.....

MR.SPEAKER:- It was a contradictory statement. ಹೋದ ವರ್ಷ ಕಾರ್ಖಾನೆ ಮಾಲೀಕರ ಷರತ್ತಿಗೆ ಬಗ್ಗಲಿಲ್ಲ ಎನ್ನುವ ಕಾರಣಕ್ಕಾಗಿ ಗೊಬ್ಬರ ಸಿಕ್ಕಿಲ್ಲ ಎಂದು ಅವರಿಗೆ.

ಶ್ರೀ ಪಾಟಾಳ್ ನಾಗರಾಜ್:- ನಮ್ಮದು ಆ ರೀತಿ ಆರೋಪಣೆ ಏನೂ ಇಲ್ಲ. ನನ್ನ ಒತ್ತಾಯ ಏನೆಂದರೆ ಪ್ರತಿ ಹಳ್ಳಿ ಹಳ್ಳಿಗೂ ಗೊಬ್ಬರ ಕೊಡಬೇಕೆಂದು ಹೇಳಿ ನಾನು ಧರಣಿ ಮಾಡುತ್ತೇನೆ. ನಾನು ವೈಯಕ್ತಿಕವಾಗಿ ಹೇಳುತ್ತಿಲ್ಲ.

ಅಧ್ಯಕ್ಷರು:- ಊಟಕ್ಕೆ ಹೋಗೋಣ, ಧರಣಿ ಬೇಡ ವಾಕೌಟ್ ಮಾಡಿ.

(ಈ ಹಂತದಲ್ಲಿ ಶ್ರೀ ಪಾಟಾಳ್ ನಾಗರಾಜ್‌ರವರು ಧರಣಿ ಮಾಡಿದರು)

(ಗೊಂದಲ)

ಶ್ರೀ ಕೆ.ಎಸ್.ಪುಟ್ಟಣ್ಣಯ್ಯ:- ಮಾನ್ಯ ಅಧ್ಯಕ್ಷರೇ, ಭೈರೇಗೌಡರ ದಕ್ಷತೆಯ ಬಗ್ಗೆ ಕಾರ್ಯ ವ್ಯಾಪ್ತಿಯ ಬಗ್ಗೆ ನಾವು ಅನುಮಾನ ಪಡುವುದಿಲ್ಲ. ಆದರೆ ಹತ್ತು ನಿಮಿಷದಲ್ಲಿ ಮುಗಿಯುವ ಕೆಲಸವನ್ನು ಇಷ್ಟೊಂದು ಲಂಬಿಸಿ ಏಕೆ ಬೆಳೆಸಿಕೊಂಡು ಹೋದರು ಎಂದು ನನಗೆ ಅರ್ಥವಾಗುತ್ತಿಲ್ಲ. ಅಸಿಸ್ಟಂಟ್ ಡೈರಕ್ಟರ್‌ರವರಿಗೆ ಹೇಳಿ ಖಾಸಗಿ ಅಂಗಡಿಯವರನ್ನು ಕರೆಯಿಸಿ ಕಾರ್ಯ ರೂಪಿಸುವುದು. ಎರಡನೆಯದು ಸಹಕಾರಿ ಸಂಘಗಳ ಮೂಲಕ ವಿತರಣೆ ಮಾಡುವುದು. ಮೂರನೆಯದು ವೇರ್ ಹೌಸ್‌ನಲ್ಲಿರತಕ್ಕಂಥ ಸ್ಟಾಕ್ ವಿತರಣೆ ಮಾಡಲು ವ್ಯವಸ್ಥೆ ಮಾಡತಕ್ಕಂಥದ್ದು ಈ 3 ಸಮಸ್ಯೆಗಳನ್ನು 24 ಗಂಟೆಯೊಳಗೆ ಬಗೆಹರಿಸುವುದನ್ನು ಬಿಟ್ಟು ಇಷ್ಟೊಂದು ದೊಡ್ಡದಾಗಿ ಬೆಳೆಸಿಕೊಂಡು ಏಕೆ ಹೋದಿರಿ? ಸರ್ಕಾರದ ಸ್ಪಷ್ಟವಾದ ನಿಲುವು ಏನು ಅಷ್ಟು ಮಾತ್ರ ನಮಗೆ ಬೇಕು. ಆದಕಾರಣ ಅಲ್ಲಿಯವರೆಗೆ ನಾವು ಕೂಡ ಧರಣಿಯಲ್ಲಿ ಪಾಲ್ಗೊಳ್ಳುತ್ತೇವೆ.

(ಈ ಸಂದರ್ಭದಲ್ಲಿ ಶ್ರೀ ಕೆ.ಎಸ್.ಪುಟ್ಟಣ್ಣಯ್ಯನವರು ಧರಣಿಯನ್ನು ಪ್ರಾರಂಭಿಸಿದರು)

ಅಧ್ಯಕ್ಷರು:- ಸನ್ಮಾನ್ಯ ಭೈರೇಗೌಡರಲ್ಲಿ ನಾನೇನು ವಿನಂತಿ ಮಾಡಿಕೊಳ್ಳುತ್ತೇನೆಂದರೆ ಯಾವ ಮಾತುಗಳನ್ನು ತಮ್ಮ ಚರಿತ್ರೆಗೆ ಕಳಂಕ ತರತಕ್ಕಂಥ ಅರ್ಥದಲ್ಲಿ ಅವರು ಆಡಿದ್ದಾರೆ, ಅದನ್ನು ನಾನು ಕಡತಕ್ಕೆ ಹೋಗುವುದಕ್ಕೆ ಬಿಡುವುದಿಲ್ಲ. ತಮ್ಮ ರೈತ ಪರವಾದ ನಿಲುವನ್ನು ನಾವೆಲ್ಲರೂ ಕೂಡ ಅಭಿನಂದಿಸುತ್ತೇವೆ. ತಮ್ಮ ವೈಯಕ್ತಿಕವಾದ ಪ್ರಾಮಾಣಿಕವಾದ ನಿಲುವು ಏನು ಇದೆ, ಅದನ್ನು ನಾವು ಅನುಮಾನಿಸುವುದಕ್ಕೆ ಸಿದ್ಧರಿಲ್ಲ. ಅನೇಕ ಭಾವನೆಗಳನ್ನು ಸುಮಾರು ಜನ ಸದಸ್ಯರು ಇವೊತ್ತು ವ್ಯಕ್ತಪಡಿಸಿದ್ದಾರೆ. ಅವೆಲ್ಲವನ್ನೂ ಕೂಡ ಅಳವಡಿಸಿಕೊಂಡು ಒಂದು ಹೇಳಿಕೆಯನ್ನು ಇವೊತ್ತು

ಸಂಜೆಯೊಳಗಾಗಲೀ ಅಥವಾ ನಾಳೆಯೊಳಗಾಗಲಿ ತಮ್ಮ ಸ್ವಯಂಪ್ರೇರಿತ ಹೇಳಿಕೆಯನ್ನು ಮಾಡಬೇಕೆಂದು ತಮ್ಮಲ್ಲಿ ವಿನಂತಿ ಮಾಡುತ್ತೇನೆ.

(ಸದನವು ಮುಂದೂಡಿ ಪುನಃ 3.00 ಗಂಟೆಗೆ ಸಮಾವೇಶಗೊಳ್ಳಲು ನಿರ್ಧರಿಸಿತು)

(ಸಭೆಯು ಮಧ್ಯಾಹ್ನ 3.20 ನಿಮಿಷಕ್ಕೆ ಸಮಾವೇಶಗೊಂಡಿತು)

(ಅಧ್ಯಕ್ಷ ಪೀಠವನ್ನು ಮಾನ್ಯ ಅಧ್ಯಕ್ಷರು ಅಲಂಕರಿಸಿದರು)

ಅಧ್ಯಕ್ಷರ ಅಪ್ಪಣೆಯ ಮೇರೆಗೆ ಪ್ರಸ್ತಾಪಿಸಲಾದ ವಿಷಯ

ವಿಷಯ:- (ಇ) ಅಧ್ಯಕ್ಷರ ಪೀಠದ ಎದಿರು ಇರತಕ್ಕ ಬಾಗಿಲನ್ನು ಮುಚ್ಚಿಸಿರುವ ಬಗ್ಗೆ.

+ಶ್ರೀ ವಾಟಾಳ್ ನಾಗರಾಜ್ (ಚಾಮರಾಜ ನಗರ):- ಮಾನ್ಯ ಅಧ್ಯಕ್ಷರೆ, ತಾವು ಬೆಳಿಗ್ಗೆ ಸದನವನ್ನು ಮುಂದೂಡಿದಾಗ ಮತ್ತೆ ಊಟದ ನಂತರ 3 ಗಂಟೆಗೆ ಸೇರೋಣ ಎಂದು ಹೇಳಿದ ಮೇಲೆ 3 ಗಂಟೆಗೆ ಸೇರಿದ್ದೇವೆ, ಆದರೆ ಈ ಸದನಕ್ಕೆ ಹೆಚ್ಚು ಸದಸ್ಯರುಗಳು ಇನ್ನೂ ಬಂದಿಲ್ಲ, ನಮ್ಮ ಸದಸ್ಯರುಗಳು ಎಲ್ಲಿ ಹೋಗಿದ್ದಾರೆ? ಮಂತ್ರಿಗಳು ಎಲ್ಲಿ ಹೋಗಿದ್ದಾರೆ? ಈ ರೀತಿಯಾದಂತಹ ಪರಿಸ್ಥಿತಿಯು ಉದ್ಭವವಾಗಬಾರದು. ನಿನ್ನೆಯ ದಿವಸ ಸದನವು ನಡೆಯುತ್ತಿರುವಂತಹ ಸಂದರ್ಭದಲ್ಲಿ ಸದನಕ್ಕೆ ಸರ್ಕಾರದ ಮುಖ್ಯ ಕಾರ್ಯದರ್ಶಿಯವರು ಬರಬೇಕೆಂದು ಹೇಳಿದ್ದೆ. ಸುಮ್ಮನೆ ಮುಖ್ಯಕಾರ್ಯದರ್ಶಿಗಳು ಕೋರಿಕೆಗೆ ಬೆಳಿಗ್ಗೆ ಬಂದರು ಹೊರಟು ಹೋದರು. ಈಗಲೂ ಸಹ ಬಂದಿಲ್ಲ. ಮುಖ್ಯಮಂತ್ರಿಗಳು ಈ ಸದನದಲ್ಲಿ ಈಗ ಇಲ್ಲ, ನೀರಾವರಿಯ ಸಚಿವರು ಸಹ ಸದನದಲ್ಲಿ ಈಗ ಇಲ್ಲ. ಬೇರೆ ಸಚಿವರುಗಳು ಸಹ ಸದನದಲ್ಲಿ ಇಲ್ಲ ಅವರುಗಳು ಎಲ್ಲಿ ಹೋಗಿದ್ದಾರೋ ನನಗೆ ಗೊತ್ತಾಗಲಿಲ್ಲ. ಅಪರೂಪಕ್ಕೆ ನಮ್ಮ ಸದನಕ್ಕೆ ಸಂಸದೀಯ ವ್ಯವಹಾರಗಳ ಸಚಿವರು ಬಂದು ಕುಳಿತುಕೊಂಡಿರುವುದು ನಮ್ಮ ಸೌಭಾಗ್ಯ. ಏಕೆಂದರೆ ಅಪರೂಪಕ್ಕೆ ಬಂದಿದ್ದಾರೆ ಅವರಿಗೆ ಈ ಸದನ ಕಂಡರೆ ಆಗುವುದಿಲ್ಲ. ಅವರು ಏನು ಇದ್ದರೂ ಸಹ ವಿಧಾನ ಪರಿಷತ್ತಿನಲ್ಲಿಯೇ ಕುಳಿತುಕೊಳ್ಳುತ್ತಾರೆ. ನನಗೆ ಏನು ಒಂದು ಭಯ ಬಂದಿದೆ ಎಂದರೆ, ನಾನು ಇವತ್ತು ಗಮನಿಸಿದೆ, ಈ ಸದನಕ್ಕೆ ವಾಸ್ತು ಸರಿ ಇಲ್ಲವೋ ಏನೋ ಎನ್ನುವುದು ಅನುಮಾನ. ಏಕೆಂದರೆ ಈ ಸದನ ಮೂಲೆಯ ಬಾಗಿಲನ್ನು ತೆರೆದಿದ್ದೀರಿ ಇದು ಏಕೆ? ಅದನ್ನು ನೋಡಿ ನನಗೆ ಭಯ ಬಂದು ಬಿಟ್ಟಿತು. ನಾವು ಸದನಕ್ಕೆ ಮಧ್ಯದಲ್ಲಿರತಕ್ಕಂತಹ ಬಾಗಿಲಿನಿಂದ ನೇರವಾಗಿ ಬರುತ್ತಿದ್ದೆವು, ನೇರವಾಗಿ ಬರುವಾಗ ಏನೋ ಒಂದು ರೀತಿಯ ವಿಶೇಷವಾದಂತಹ ಶಕ್ತಿಯು ಕಾಣುತ್ತಿತ್ತು. ಈ ಮೂಲೆಯಲ್ಲಿ ಇರತಕ್ಕಂತಹ ಬಾಗಿಲನ್ನು ಶಾಸ್ತ್ರದವರು ಅಥವಾ ಮಾಯಮಂತ್ರದವರು ಏನಾದರೂ ಹೇಳಿ ತೆಗೆಸಿದಿರಾ? ಏನೂ ನನಗೆ ಗೊತ್ತಿಲ್ಲ. ಈ ಮೂಲೆಯ ಬಾಗಿಲನ್ನು ನನಗೆ ಗೊತ್ತಿರುವಂತೆ ತೆಗೆಸಬಾರದು. ಈ ಸದನದ ಮೂಲೆಯ ಬಾಗಿಲನ್ನು ತೆಗೆಸಿದರೆ ಬರಬೇಕು ಸದನಕ್ಕೆ ಎಂದು ಮನಸ್ಸು ಇದ್ದರೂ ಕೂಡ ಬರುವುದಕ್ಕೆ ಆಗುತ್ತಿಲ್ಲ ಮತ್ತೆ